# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

Sampreethi - Samruddhi | Volume : 5 | Issue : 07 | Nov. 2022 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 5 | ಸಂಚಿಕೆ : 07 | ನವೆಂಬರ್ 2022 | ಪುಟಗಳು : 32 | ₹ 20 ರೂ.



|| Jai Sri Gurudev ||



# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi & Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

**COURSES OFFERED:**

- CIVIL ENGINEERING
- MECHANICAL ENGINEERING (General)
- COMPUTER SCIENCE & ENGINEERING
- ELECTRICAL & ELECTRONICS ENGINEERING
- ELECTRONICS & COMMUNICATION ENGINEERING

Eligibility:-
Pass in SSLC or Equivalent Examination with 35% aggregate.

**OUR VISION:**

To Impart Quality Education
Transformation of Child through Excellent Education
Child Centered Education



## *Hunt Your Dreams*

**Institution Code : 541**



### Salient Features

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library



### For Admissions, Contact :

**PRINCIPAL**
**SJ BGS POLYTECHNIC,**

BGSIT CAMPUS, BG Nagar (Bellur Cross)
Nagamangala Taluk, Mandya District
Karmataka - 571 448

**E-mail :** ppl.sjbgsp@gmail.com
**Web :** www.sjbgsp.com
**Cell No. :** 9448207483

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


## ಸಂಪಾದಕೀಯ


**ನವೆಂಬರ್ : 2022**

**ಸಂಪುಟ 5, ಸಂಚಿಕೆ 7**



ಸಂಪಾದಕರು

**ಡಾ|| ಸಿ. ನಂಜುಂಡಯ್ಯ**



**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಸಂಪಾದಕರು

**ಸಂಪ್ರೀತಿ – ಸಮೃದ್ಧಿ**

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

**#66, ಸಂಪ್ರೀತಿ – ಸದನ**
**ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,**
**ಮಾಗಡಿ – 562 120 ರಾಮನಗರ ಜಿಲ್ಲೆ.**

ಮುದ್ರಕರು

- **ಕಂಪ್ಯೂಟರ್ ವರ್ಲ್ಡ್**
  ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
  ಮಲ್ಲಿಗೆ ತೋಟ, ಮಾಗಡಿ ರಸ್ತೆ,
  ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com

**8971608213**

ಸಂಪ್ರೀತಿ – ಸಮೃದ್ಧಿ


ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ
ಬಾರಿಸು ಕನ್ನಡ ಡಿಂಡಿಮವ ॥

ಸತ್ತಂತಿಹರನು ಬಡಿದೆಚ್ಚರಿಸು
ಕಚ್ಚಾಡುವರನು ಕೂಡಿಸಿ ಒಲಿಸು
ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು
ಒಟ್ಟಿಗೆ ಬಾಳುವ ತೆರದಲಿ ಹರಸು

ಬಾರಿಸು ಕನ್ನಡ ಡಿಂಡಿಮವ ॥

ಚೈತ್ರ ಶಿವೇತರ ಕೃತಿ ಕೃತಿಯಲ್ಲಿ
ಮೂಡಲಿ ಮಂಗಳ ಮತಿ ಮತಿಯಲ್ಲಿ
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ

ಬಾರಿಸು ಕನ್ನಡ ಡಿಂಡಿಮವ ॥

ಕನ್ನಡಕ್ಕೆ ನಿಜವಾದ ಅಪಾಯವಿರುವುದು ಹೊರಗಿನಿಂದಲ್ಲ. ಅದು ನಮ್ಮೊಳಗೇ ಇದೆ. ಮೊದಲನೆಯದಾಗಿ ಶಿಕ್ಷಣದ ಉದ್ದೇಶದ ಕುರಿತಾಗಿ ನಮ್ಮಲ್ಲಿ ಬೇರೂರಿರುವ ತಪ್ಪುಗ್ರಹಿಕೆ. ಶಿಕ್ಷಣವು ಕೇವಲ ನೌಕರಿಗಾಗಿ. ಆಂಗ್ಲಭಾಷೆ ಮತ್ತು ಮಾಧ್ಯಮಲ್ಲಿ ಕಲಿತರೆ ಉದ್ಯೋಗ ಖಾತ್ರಿ ಎಂಬ ತಪ್ಪು ತಿಳುವಳಿಕೆ ನಮ್ಮಲ್ಲಿ ಬೇರೂರಿರುವುದು ಒಂದು ದುರಂತವೇ ಸರಿ. ಪ್ರಸ್ತುತ ಉನ್ನತ ಹುದ್ದೆಯಲ್ಲಿರುವವರೆಲ್ಲರೂ ಆಂಗ್ಲ ಮಾಧ್ಯಮದಲ್ಲಿ ಕಲಿತವರೇ ಎನ್ನುವ ಭ್ರಮಾಲೋಕದಲ್ಲಿ ಕೆಲವರಿದ್ದಾರೆ. ಭಾರತರತ್ನ ಪ್ರೊ. ಯು. ಆರ್. ರಾವ್ ಅವರಂತಹ ವಿಜ್ಞಾನಿಗಳು ಓದಿದ್ದು ಕನ್ನಡ ಮಾಧ್ಯಮದಲ್ಲಿಯೇ ಎನ್ನುವುದನ್ನು ನಾವೆಲ್ಲರೂ ಮನಗಾಣಬೇಕಿದೆ. ಇನ್ನೂ ಕೆಲವರಿಗೆ ತಮಗೆ ಆಂಗ್ಲಭಾಷೆ ಅರ್ಥವಾಗದಿದ್ದರೂ ಪರವಾಗಿಲ್ಲ, ತಮ್ಮ ಮಕ್ಕಳು ಆಂಗ್ಲಭಾಷೆಯಲ್ಲಿ ಮಾತನಾಡಿ ತಮನ್ನು ಪುನೀತರನ್ನಾಗಿ ಮಾಡಬೇಕೆಂಬ ಅವ್ಯಕ್ತ ಬಯಕೆ! ನಮ್ಮ ಆಂಗ್ಲಭಾಷಾ ವ್ಯಾಮೋಹ ಯಾವ ಮಟ್ಟವನ್ನು ತಲುಪಿದೆ ಎಂದರೆ ಕನ್ನಡ ಸಾಹಿತ್ಯ ಪರಿಷತ್ತು ಇರುವಂತೆ ಕರ್ನಾಟಕದಲ್ಲಿ ಆಂಗ್ಲ ಸಾಹಿತ್ಯ ಪರಿಷತ್ತು ಬೇಕು ಎನ್ನುವ ಭೂಪರೂ ನಮ್ಮಲ್ಲಿದ್ದಾರೆ!

ಆದ್ದರಿಂದ ತಾಯಿಯಷ್ಟೇ ತಾಯಿ ಭಾಷೆಯನ್ನೂ ಪ್ರೀತಿಸಬೇಕು. ತಾಯಿಭಾಷೆಯನ್ನು ಮರೆತರೆ ತಾಯಿಯನ್ನೇ ಮರೆತಂತೆ. ಪ್ರಾಥಮಿಕ ಹಂತದವರೆಗೆ ತಾಯಿಭಾಷೆಯಲ್ಲಿಯೇ ನಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಬೇಕು. ಆ ಮೂಲಕ ಕನ್ನಡದ ಬೆಳವಣಿಗೆಯ ವಿಷಯದಲ್ಲಿ ಕನ್ನಡಿಗರಾದ ನಾವು ನಮ್ಮ ಕರ್ತವ್ಯವನ್ನು ಪಾಲಿಸಬೇಕು. ದಿನಗಳೆದಂತೆ ಬಿಕ್ಕಟ್ಟುಗಳು ಹೆಚ್ಚುತ್ತಿರುವುದು ನಿಜ. ಆದರೆ ಬಿಕ್ಕಟ್ಟುಗಳ ನಡುವೆಯೂ ಕನ್ನಡನಾಡಿನಲ್ಲಿ ಆಳವಾಗಿ ಬೇರುಬಿಟ್ಟಿರುವ ಕನ್ನಡವು ಬೆಳೆಯುತ್ತಲೇ ಇದೆ. ಬೆಳೆಯಲೇಬೇಕು, ಬೆಳೆಯುತ್ತಿರಲೇಬೇಕು ಎಂಬ ಸದಾಶಯವನ್ನು ಕನ್ನಡಿಗರೆಲ್ಲರೂ ಇಟ್ಟುಕೊಳ್ಳೋಣ. ॐ

*ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ*



# ಕನ್ನಡ  ರಾಜ್ಯೋತ್ಸವ

ಕನ್ನಡ ರಾಜ್ಯೋತ್ಸವ ದಿನವನ್ನು ಪ್ರತಿ ವರ್ಷ ನವೆಂಬರ್ 1 ರಂದು ಆಚರಿಸಲಾಗುತ್ತದೆ. ಈ ದಿನ ಕರ್ನಾಟಕವನ್ನು ರಚಿಸಲಾಯಿತು, ಆದ್ದರಿಂದ ಈ ದಿನವನ್ನು ಕನ್ನಡ ದಿನ, ಕರ್ನಾಟಕ ರಚನೆಯ ದಿನ ಅಥವಾ ಕರ್ನಾಟಕ ದಿನ ಎಂದೂ ಕರೆಯುತ್ತಾರೆ.


ರಾಜ್ಯೋತ್ಸವ ಎಂದರೆ ಒಂದು ರಾಜ್ಯದ ಜನನ. 1956 ರಲ್ಲಿ, ಭಾರತದಲ್ಲಿ ಎಲ್ಲಾ ಕನ್ನಡ ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸುವ ಮೂಲಕ ರಾಜ್ಯವನ್ನು ರಚಿಸಲಾಯಿತು, ಇದನ್ನು ಕರ್ನಾಟಕ ಎಂದು ಹೆಸರಿಸಲಾಯಿತು. ಮಾತನಾಡುವ ಭಾಷೆ ಕನ್ನಡವಾಗಿತ್ತು. ಈ ದಿನವನ್ನು ರಾಜ್ಯ ರಜೆ ಎಂದು ಘೋಷಿಸಲಾಗಿದೆ. ಕರ್ನಾಟಕದ ಜನರು ಕನ್ನಡ ರಾಜ್ಯೋತ್ಸವ ದಿನವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ.

ಈ ದಿನದಂದು ಕರ್ನಾಟಕದ ಜನರು ತಮ್ಮ ಸಾಂಪ್ರದಾಯಿಕ ಬಟ್ಟೆಗಳನ್ನು ಧರಿಸುತ್ತಾರೆ ಮತ್ತು ಕೆಂಪು ಮತ್ತು ಹಳದಿ ಬಣ್ಣದ ತಮ್ಮ ರಾಜ್ಯ ಧ್ವಜವನ್ನು ಹಾರಿಸುತ್ತಾರೆ. ಅಲ್ಲಿನ ಜನರು ಕನ್ನಡ ಗೀತೆಯನ್ನು ಹಾಡುತ್ತಾರೆ ("ಜಯ ಭಾರತ ಜನನಿಯ ತನುಜಾತೆ").

ಈ ರಾಜ್ಯೋತ್ಸವವನ್ನು ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ನರು ಎಲ್ಲಾ ಧರ್ಮದವರೂ ಆಚರಿಸುತ್ತಾರೆ, ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದ ಅನೇಕ ಭಾಗಗಳಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ.

**ಕನ್ನಡ ರಾಜ್ಯೋತ್ಸವ ಇತಿಹಾಸ:**

ಅಲ್ಲಲ್ಲಿ ಚದುರಿದ್ದ ಕನ್ನಡವನ್ನೆಲ್ಲ ಒಂದು ಗೂಡಿಸಿ ಅದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ದಿನ. ಈಗಿನ ಕರ್ನಾಟಕ ಮೊದಲಿಗೆ ಮೈಸೂರು ಹೆಸರಿನಿಂದ ಗುರುತಿಸಿಕೊಂಡಿತ್ತು. ಕರ್ನಾಟಕ ಏಕೀಕರಣ ಚಳುವಳಿಯನ್ನು 1905ರಲ್ಲಿ ಪ್ರಾರಂಭಿಸಿದರು. 1950ರಲ್ಲಿ ಭಾರತವು ಗಣರಾಜ್ಯವಾದ ನಂತರ ಭಾರತದ ವಿವಿಧ ಪ್ರಾಂತ್ಯಗಳು, ಭಾಷೆಗಳ ಆಧಾರದ ಮೇಲೆ ರಾಜ್ಯಗಳಾಗಿ ರೂಪುಗೊಂಡವು. ಈ ಹಿಂದೆ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಹಲವಾರು ಸಂಸ್ಥಾನಗಳನ್ನು ಒಳಗೊಂಡಂತೆ ರಾಜ್ಯಗಳು ರೂಪುಗೊಂಡಿದ್ದವು. ಕನ್ನಡ



ಮಾತನಾಡುವ ಪ್ರಾಂತ್ಯಗಳು ಸೇರಿ, ಮೈಸೂರು ರಾಜ್ಯವು ಉದಯವಾಯಿತು. 1956 ರ ನವೆಂಬರ್ 1 ರಂದು, ಮದ್ರಾಸ್, ಬಾಂಬೆ, ಹೈದರಬಾದ್ ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು ಮೈಸೂರು ರಾಜ್ಯವಾಯಿತು ಹಾಗೂ ಉತ್ತರ ಕರ್ನಾಟಕ, ಮಲೆನಾಡು ಮತ್ತು ಹಳೆಯ ಮೈಸೂರು ಎಂಬುದಾಗಿ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯವನ್ನು ಮೂರು ಪ್ರದೇಶಗಳಲ್ಲಿ ಗುರುತಿಸಲಾಯಿತು. ಹೊಸದಾಗಿ ಏಕೀಕೃತಗೊಂಡ ರಾಜ್ಯದ ಆರಂಭದಲ್ಲಿ ಹೊಸ ಘಟಕದ ಕೋರ್ ರೂಪುಗೊಂಡು ಮುಂಚಿನ ರಾಜ್ಯದ ಹೆಸರು ಇರಲೆಂದು "ಮೈಸೂರು" ಹೆಸರನ್ನು ಉಳಿಸಿಕೊಂಡರು. ಕರ್ನಾಟಕ ರಾಜ್ಯ ರೂಪುಗೊಂಡಾಗ ಒಟ್ಟು 19 ಜಿಲ್ಲೆಗಳನ್ನು ಒಳಗೊಂಡಿತ್ತು. ಅಂದಿನಿಂದ ನವೆಂಬರ್ 1 ನ್ನು ಕನ್ನಡ ರಾಜ್ಯೋತ್ಸವ / ಕರ್ನಾಟಕ ರಾಜ್ಯೋತ್ಸವವಾಗಿ ಆಚರಿಸಲಾಗುತ್ತದೆ.

**ಕರ್ನಾಟಕ ಎಂದು ಹೆಸರು ಬರಲು ಕಾರಣ :**

ಕರ್ನಾಟಕ ಪದದ ಮೂಲದ ಬಗ್ಗೆ ಹಲವು ಅಭಿಪ್ರಾಯಗಳಿದ್ದರೂ ಸಾಮಾನ್ಯವಾಗಿ "ಕರು" ಮತ್ತು "ನಾಡು" ಸೇರಿ "ಎತ್ತರದ ಭೂಮಿ" ಎಂಬರ್ಥದ ಕರುನಾಡು ಪದದಿಂದ ಉಗಮವಾಗಿದೆ ಎನ್ನಲಾಗಿದೆ. ಕರು ಎಂದರೆ ಕಪ್ಪು, ನಾಡು ಎಂದರೆ ಪ್ರದೇಶ ಎಂದು ಅರ್ಥೈಸಿಕೊಂಡರೆ ಬಯಲು ಸೀಮೆಯ ಕಂಡು ಕಪ್ಪು ಹತ್ತಿ ಮಣ್ಣಿನಿಂದಾಗಿ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ. ಕೃಷ್ಣಾ ನದಿಯ ದಕ್ಷಿಣಕ್ಕೆ ಎರಡೂ ಕಡೆ ಜಲಾವೃತವಾದ ಪ್ರದೇಶವಾಗಿರುವುದರಿಂದ ಬ್ರಿಟೀಷರ ಕಾಲದಲ್ಲಿ ಕಾರ್ನಾಟಿಕ್ ಅಥವಾ ಕರ್ನಾಟಕ ಹೆಸರು ಬಳಕೆಗೆ ಬಂತು.

**ಕನ್ನಡ ಬಾವುಟ:**

ಕರ್ನಾಟಕಕ್ಕೆ ತನ್ನದೇ ಆದ ಪ್ರತ್ಯೇಕ ಭಾವುಟವಿದೆ. ಕನ್ನಡಕ್ಕೊಂದು ಭಾವುಟದ ಅವಶ್ಯಕತೆಯನ್ನು ಅರಿತ ಕನ್ನಡದ ಹೋರಾಟಗಾರರಾದ ಎಂ ರಾಮಮೂರ್ತಿಗಳು ಹಳದಿ ಹಾಗೂ ಕೆಂಪು ಬಣ್ಣ ಬಳಸಿ ಭಾವುಟವನ್ನು ಸಿದ್ದಪಡಿಸಿದರು. ಮೂಲತಃ ಹಳದಿ ಬಣ್ಣವು ಕನ್ನಡಾಂಬೆಯ ಅರಿಶಿನ ಮತ್ತು ಕುಂಕುಮವನ್ನು ಸೂಚಿಸುತ್ತದೆ ಹಾಗೂ ಹಳದಿ ಬಣ್ಣವು ಶಾಂತಿ, ಸೌಹಾರ್ದತೆ ಸೂಚಿಸಿದರೆ ಕೆಂಪು ಬಣ್ಣ ಕ್ರಾಂತಿಯ ಸಂದೇಶ ನೀಡುತ್ತದೆ. ಆರಂಭದಲ್ಲಿ ಕನ್ನಡ ಬಾವುಟ ಸಿದ್ಧಗೊಂಡಾಗ ಬಾವುಟದ ಮಧ್ಯೆ ಕರ್ನಾಟಕದ ಭೂಪಟ ಮತ್ತು ಅದರ ನಡುವಿನಲ್ಲಿ ಏಳು ಕವಲುಗಳುಳ್ಳ ತೆನೆಯ ಚಿತ್ರವಿತ್ತು. ಮುದ್ರಿಸಲು ಸ್ವಲ್ಪ ಕಷ್ಟವಾಗುತ್ತಿದ್ದರಿಂದ ಅದನ್ನು ತೆಗೆದು ಕೇವಲ ಹಳದಿ ಮತ್ತು ಕೆಂಪು ಬಣ್ಣವನ್ನು ಮಾತ್ರ ಉಳಿಸಿಕೊಳ್ಳಲಾಯಿತು.

**ಕನ್ನಡ ರಾಜ್ಯೋತ್ಸವ ಆಚರಣೆ:**

ರಾಜ್ಯೋತ್ಸವವನ್ನು ಕರ್ನಾಟಕದಲ್ಲಿರುವ ಬಹುತೇಕ ಹಿಂದೂಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಧರ್ಮಬೇಧವಿಲ್ಲದೆ ಆಚರಿಸುತ್ತಾರೆ. ಸಾಮಾನ್ಯ ವ್ಯಕ್ತಿಗಳು ಕೂಡ ತಮ್ಮ ವಾಹನಗಳಿಗೆ ಕನ್ನಡ ಭಾವುಟವನ್ನು ಅಲಂಕರಿಸುವ ಮೂಲಕ ಆಚರಿಸುತ್ತಾರೆ. ರಾಜ್ಯ ಸರ್ಕಾರ ಕರ್ನಾಟಕ ರಾಜ್ಯೋತ್ಸವದ ದಿನ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ಪ್ರಶಸ್ತಿ ಪ್ರಕಟ ಪಡಿಸಲಾಗುತ್ತದೆ. ರಾಜ್ಯೋತ್ಸವದ ಪ್ರಯುಕ್ತ ಕರ್ನಾಟಕ ಸರ್ಕಾರದ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಗುತ್ತದೆ. ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿಶ್ವದಾದ್ಯಂತ ಹಮ್ಮಿಕೊಳ್ಳಲಾಗುತ್ತದೆ. ರಾಜ್ಯದ ಮುಖ್ಯಮಂತ್ರಿ ಸಾಧಕರಿಗೆ ಈ ಪ್ರಶಸ್ತಿಯನ್ನು ವಿತರಿಸುತ್ತಾರೆ. ಕರ್ನಾಟಕದಲ್ಲಿನ ಇನ್ನಿತರ ಪ್ರದೇಶಗಳಾದ ಮುಂಬಯಿ, ದೆಹಲಿ ಮುಂತಾದ ಕಡೆಯು ಕರ್ನಾಟಕ ರಾಜ್ಯೋತ್ಸವ ಆಚರಿಸಲಾಗುತ್ತದೆ. ಇದಲ್ಲದೆ ಸಾಗರೋತ್ತರದಲ್ಲಿ ಕನ್ನಡ ಸಂಸ್ಥೆ, ಅಮೇರಿಕಾದ, ಸಿಂಗಾಪುರ್, ದುಬೈ, ಮಸ್ಕಟ್, ದಕ್ಷಿಣ ಕೊರಿಯಾ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ಮೊದಲಾದ ಕಡೆಗಳಲ್ಲಿ ನೆಲೆಸಿರುವ ಕನ್ನಡಿಗರು ಕರ್ನಾಟಕ ರಾಜ್ಯೋತ್ಸವ ಆಚರಿಸುತ್ತಾರೆ. ಇನ್ನು ರಾಜ್ಯೋತ್ಸವ ಆಚರಣೆಯಲ್ಲಿ ನಮ್ಮ ನಿಮ್ಮೆಲ್ಲರ ಪಾತ್ರ ಹೆಚ್ಚು ಮಹತ್ವದ್ದಾಗಿದೆ. ನಾಡು, ನುಡಿ ಮತ್ತು ಇಲ್ಲಿನ ಸಂಪತ್ತನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವುದು ಕೂಡ ನಮ್ಮ ನಿಮ್ಮ ಜವಾಬ್ದಾರಿಯಾಗಿದೆ. ಇದ್ಯಾವುದಕ್ಕೂ ಧಕ್ಕೆ ಬಾರದಂತೆ ನಡೆಯುವುದು ಕೂಡ ನಮ್ಮ ಕರ್ತವ್ಯವಾಗಿದೆ.





# ಮಕ್ಕಳಿಗಾಗಿ 'ಆಸ್ತಿ' ಮಾಡುವುದು ಬೇಡ, ಮಕ್ಕಳನ್ನೇ 'ಆಸ್ತಿ'ಯನ್ನಾಗಿ ಮಾಡಿ

✍ **ಡಾ. ಡಿ. ಸಿ. ರಾಮಚಂದ್ರ**, ಚಿಂತಕರು

ಮಕ್ಕಳು ಮನೆಯ ನಂದಾದೀಪ, ಮನೆ–ಮನ ಬೆಳಗುವ ಹೊಂಬೆಳಕು. ದೈನಂದಿನ ಬದುಕಿನ ನೋವು, ಸಂಕಟ ಮತ್ತು ದುಃಖಗಳನ್ನು ಮಣಿಸಿ ಸಾಮೀಪ್ಯದ ಪ್ರತಿಕ್ಷಣಗಳನ್ನು ಉಲ್ಲಾಸಮಯವಾಗಿಸಿ ಸಂತಸದ ಸವಿಭಾವ ಮೂಡಿಸುವ ಚೇತನ ಮಕ್ಕಳೆಂಬುದು ಅನುಭವದ ನುಡಿ, ನಿಜವಾದ ಮಾತು, ಮಕ್ಕಳ ನಗು, ಮುಗ್ಧ ನಡವಳಿಕೆ ಸೂಜಿಗಲ್ಲಿನಂತೆ, ಸರ್ವರನ್ನು ಸೆಳೆಯಬಲ್ಲದ್ದು.

ಮಕ್ಕಳ ಲಾಲನೆ – ಪಾಲನೆ – ಪೋಷಣೆ ನೀಡುವಷ್ಟು ಮುದ ಮತ್ತ್ಯಾವುದರಿಂದಲೂ ಅಸಾಧ್ಯ. ಮಕ್ಕಳಿದ್ದರೆ ನಗು, ಸಡಗರ, ಜೀವಂತಿಕೆ ಕಟ್ಟಿಟ್ಟ ಬುತ್ತಿ, ಕಪಟ, ಸುಳ್ಳು, ತಟವಟಗಳಿರಯದ ಮಕ್ಕಳು ದೈವಸ್ವರೂಪಿ, ಸಮಭಾವ–ಸಮಾನತೆ ಮಕ್ಕಳ ಮೂಲ ಗುಣ.

**ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್ ।**

**ಪ್ರಾಪ್ತೇತು ಷೋಡಶೇ ವರ್ಷೇ ಪುತ್ರಂ ಮಿತ್ರವದಾಚರೇತ್ ॥**

ಮಗನನ್ನು ಮೊದಲಿನ ಐದು ವರ್ಷಗಳಲ್ಲಿ ಮುದ್ದಿಸಿ ಬೆಳೆಸಬೇಕು. ಅನಂತರ ಹತ್ತು ವರ್ಷ ದಂಡಿಸಿ ಬುದ್ಧಿಕಲಿಸಬೇಕು. ಹದಿನಾರನೆಯ ವರ್ಷ ಬರುತ್ತಲೇ ಮಗನನ್ನು ಸ್ನೇಹಿತನಂತೆ ನೋಡಿಕೊಳ್ಳಬೇಕು ಎಂದು ಸುಭಾಷಿತದಲ್ಲಿ ಹೇಳಿದೆ.

ಪ್ರೇಮ–ಕಾಮದ ಬಗ್ಗೆ ಏನೊಂದೂ ಅರಿಯದ ಮುಗ್ಧ ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳುವ ಪ್ರಕರಣಗಳು ದಿನದಿಂದ ದಿನಕ್ಕೆ ಅಧಿಕವಾಗುತ್ತಲೇ ಇದೆ. ಮಕ್ಕಳ ಮುಗ್ಧತೆಯನ್ನೇ ಬಂಡವಾಳವಾಗಿಸಿಕೊಂಡು ವಿವಿಧ ಬಗೆಯ ಆಸೆಗಳನ್ನು ತೋರಿಸಿ ಮಕ್ಕಳ ಮೇಲೆ ಎಸಗುವ ಲೈಂಗಿಕ ದೌರ್ಜನ್ಯ ಇಡೀ ನಾಗರೀಕ ಸಮಾಜವೇ ತಲೆ ತಗ್ಗಿಸಬೇಕಾದ ವಿಚಾರ. ಎಲ್ಲೋ ಒಂದೆಡೆ ಮಾತ್ರ ಕಂಡು ಬರುತ್ತಿದ್ದ ಇಂತಹ ಘಟನೆಗಳು ಇಂದು ಎಲ್ಲೆಡೆ ಹರವಿಕೊಂಡಿರುವುದು ಅಪಾಯದ ಮುನ್ಸೂಚನೆ ಹಾಗೂ ಆತಂಕದ ವಿಚಾರ.

ಮಕ್ಕಳ ಮುಗ್ಧತೆಯ ದುರ್ಬಳಕೆ ಹಾದಿಯ ಮೊದಲ ಹೆಜ್ಜೆಯೇ ದ್ವೇಷದ ಭಾವ ಭಿತ್ತುವಿಕೆ. ಅಸಮಾಧಾನಿತ ಪೋಷಕರು ಮಕ್ಕಳಲ್ಲಿ ತಂದೆ, ತಾಯಿ ಇಲ್ಲವೇ ಅಜ್ಜ–ಅಜ್ಜಿಯರ ಬಗ್ಗೆ ದ್ವೇಷ ಬರುವಂತಹ ಭಾವದ ಅಲೆಗಳನ್ನು ಮಕ್ಕಳ ಹೃದಯ ಸಮುದ್ರದಲ್ಲಿ ಉಕ್ಕಿಸುವುದು ಅಕ್ಷಮ್ಯ ಅಪರಾಧ. ಮಕ್ಕಳ ಮನದಲ್ಲಿ ಜಾತಿ, ಮತ, ಧರ್ಮದ ವಿಷಬೀಜವನ್ನು ಭಿತ್ತಿ ಒಡಕು ಭಾವನೆಗಳನ್ನು ಮೂಡಿಸಿ ನಿರ್ದಿಷ್ಟ ಧರ್ಮ, ಮತ, ಜಾತಿ ಮತ್ತು ಜನಾಂಗವನ್ನು ಪ್ರೀತಿಸದಂತೆ, ದ್ವೇಷಿಸುವಂತೆ, ಸಹಚರ್ಯಕ್ಕೆ ಹೋಗದಂತೆ ತಡೆಯುವುದು ಸಹ ಮುಗ್ಧತೆಯ ದುರ್ಬಳಕೆ. ಈ ನಡವಳಿಕೆ ಮಕ್ಕಳ ಮನವನ್ನು ಸಂಕುಚಿತಗೊಳಿಸುವುದಲ್ಲದೆ, ಸಮಾನ ಭಾವದ ಸೆಲೆಯನ್ನೇ ಬತ್ತಿಸಿಬಿಡುವುದು ಖಂಡಿತ.

ಮಕ್ಕಳ ಮುಗ್ಧತೆಯನ್ನು ದುರುಪಯೋಗ ಮಾಡಿಕೊಳ್ಳುವ ಕೃತ್ಯಕ್ಕೆ ದಿನಕ್ಕೊಂದು ಹೊಸ ಮಾರ್ಗಗಳು

### ಸಮೃದ್ಧಿ ಸುಜ್ಞಾನ

ವಿದ್ಯೆ ಇದ್ದರೇನಂತೆ–ವಿವೇಕ ಇಲ್ಲದಿದ್ದರೆ? ಹಣ ಇದ್ದರೇನಂತೆ–ಗುಣ ಇಲ್ಲದಿದ್ದರೆ? ಪ್ರಾಣ ಇದ್ದರೇನಂತೆ–ತ್ರಾಣ ಇಲ್ಲದಿದ್ದರೇ? ಗುರು ಇದ್ದರೇನಂತೆ–ಅರಿವು ಇಲ್ಲದಿದ್ದರೆ? ರೂಪ ಇದ್ದರೇನಂತೆ–ಮಾನ ಇಲ್ಲದಿದ್ದರೆ? ಸುಖ ಇದ್ದರೇನಂತೆ–ಶಾಂತಿ ಇಲ್ಲದಿದ್ದರೆ? ಏನಿದ್ದರೇನಂತೆ–ಮಾನವೀಯತೆ ಇಲ್ಲದಿದ್ದರೆ?

ತೆರೆದುಕೊಳ್ಳುವುದು ನಿಜ. ಆ ದುರಾತ್ಮರು ಎಲ್ಲೋ ದೂರದಲ್ಲಿಲ್ಲ. ನಮ್ಮೆಲ್ಲರ ನಡುವೆಯೇ ಮುಖವಾಡ ಹೊತ್ತು ಬದುಕುತ್ತಿದ್ದು, ನಿತ್ಯ ನಮ್ಮೊಂದಿಗೆ ವ್ಯವಹರಿಸುತ್ತಿರುತ್ತಾರೆ. ಸೂಕ್ಷ್ಮತೆಯ ಕೊರತೆಯೋ? ಸಂವೇದನಾಶೀಲತೆಯ ಅಭಾವವೋ? ಬದುಕಿನ ಧಾವಂತವೋ? ಒಟ್ಟಿನಲ್ಲಿ ಆ ದುರ್ಮಾರ್ಗಿಗಳನ್ನು ಗುರುತಿಸುವುದಿಲ್ಲ, ಗುರುತಿಸಿದರೂ ಗದರಿಸುವಲ್ಲಿ ಸಮಾಜ ಮತ್ತು ನಾಗರೀಕರು ವಿಫಲರಾಗುತ್ತಿರುವುದು ಕಟು ವಾಸ್ತವ. ಮಕ್ಕಳ ಮನ ಮಂದಿರವನ್ನು ಹಾಳುಗೆಡುವಿ ತನ್ಮೂಲಕ ಭವಿಷ್ಯದ ಸಮಾಜವನ್ನು ಅನಾರೋಗ್ಯಪೀಡತ, ಅನಾಗರೀಕಗೊಳಿಸುವ ಇಂತಹ ಕೃತ್ಯಗಳಿಗೆ ಇನ್ನಾದರೂ ಕಡಿವಾಣ ಬೀಳಬೇಕು. ಪೋಷಕರು ಮತ್ತು ನಾಗರೀಕರಾದಿಯಾಗಿ ಸರ್ವರೂ ಮಕ್ಕಳ ಮುಗ್ಧ ಲೋಕಕ್ಕೆ ಕಲ್ಲು ಹಾಕುವವರ ವಿರುದ್ಧ ಕಟ್ಟೆಚ್ಚರವಾಗಿರಬೇಕು. ಮಕ್ಕಳನ್ನು ಮಕ್ಕಳಂತೆ, ಕಲ್ಪನಾ-ಭಾವನಾ ಲೋಕದೊಳಗಿನ ವಿಹಾರಿಗಳಂತೆಯೇ ಇರಲು ಬಿಡಬೇಕು. ಆಗ ಮಾತ್ರ ಮಕ್ಕಳ ಮುಗ್ಧತೆಯ ದುರ್ಬಳಕೆಗೆ ಇತಿಶ್ರೀ ಹಾಡಲು ಸಾಧ್ಯ. ಇಲ್ಲವಾದಲ್ಲಿ ಮಕ್ಕಳ ಬದುಕು ಮಾತ್ರವಲ್ಲ ಸಮಾಜದ ಭವಿಷ್ಯವೂ ಮಣ್ಣುಪಾಲಾಗುವುದು ನಿಶ್ಚಿತ.

ಹಿಂದೆ ಅವಿಭಕ್ತ ಕುಟುಂಬಗಳಿದ್ದಾಗ ಅಜ್ಜ-ಅಜ್ಜಿ, ದೊಡ್ಡಪ್ಪ-ದೊಡ್ಡಮ್ಮ, ಚಿಕ್ಕಪ್ಪ-ಚಿಕ್ಕಮ್ಮ, ಅಪ್ಪ-ಅಮ್ಮ .......... ಹೀಗೆ ಎಲ್ಲರೂ ಕೂಡಿ ಬಾಳುತ್ತಿದ್ದರು. ಕೂಡಿ ಬಾಳಿದರೆ ಸ್ವರ್ಗಸುಖ ಎಂದು ನಂಬಿದ್ದರು. ಅಂತಹ ಕುಟುಂಬಗಳಲ್ಲಿ ಯಾರ ಮಕ್ಕಳು ತಪ್ಪು ಮಾಡಿದರೂ ಯಾರಾದರೊಬ್ಬರು ತಿಳಿ ಹೇಳುತ್ತಿದ್ದರು, ತಿದ್ದುತ್ತಿದ್ದರು. ಅಜ್ಜ-ಅಜ್ಜಿಯರು ತಮ್ಮ ಅನುಭವಗಳನ್ನು ಪುರಾಣದ ಕಥೆಗಳನ್ನೋ ಹೇಳುತ್ತಾ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಾ ಅವರಲ್ಲಿ ನೈತಿಕ ಪ್ರಜ್ಞೆ ಜಾಗೃತವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ಮನುಷ್ಯ ನವ ನಾಗರೀಕತೆಗೆ ಒಳಗಾದಂತೆಲ್ಲ ಪಾಶ್ಚಿಮಾತ್ಯ ಜೀವನ ಶೈಲಿಗೆ ಮಾರು ಹೋಗಿದ್ದಾನೆ. ಅದರ ಪರಿಣಾಮವಾಗಿ ಅವಿಭಕ್ತ ಕುಟುಂಬಗಳೆಲ್ಲ ಛಿದ್ರ ಛಿದ್ರವಾಗಿವೆ. ದಾರಿ ತಪ್ಪುವ ಮಕ್ಕಳನ್ನು ತಡೆಯುವವರಿಲ್ಲ, ದಂಪತಿಗಳಿಬ್ಬರೂ ನೌಕರಿ ಹಿಡಿಯುತ್ತಾರೆ. ಮಾರ್ಗದರ್ಶನ ಮಾಡಲು ಮನೆಯಲ್ಲಿ ಹಿರಿಯರೂ ಇಲ್ಲ. ತಪ್ಪು ಮಾಡಿದ್ದನ್ನು ಕೇಳುವವರೂ ಇಲ್ಲ ಎನ್ನುವಂತಾಗಿದೆ. ಮನೆಯೇ ಮೊದಲ ಪಾಠಶಾಲೆ ಎಂದರೆ ಅಲ್ಲಿಯೂ ತಿದ್ದುವವರಿಲ್ಲ. ಶಾಲೆಗಳಲ್ಲಿಯೂ ಸ್ಥಿತಿ ಭಿನ್ನವಾಗಿಲ್ಲ ಎಂದ ಮೇಲೆ ಮಕ್ಕಳಲ್ಲಿ ಸನ್ನಡತೆಯನ್ನು ಬೆಳಸುವವರು ಯಾರು? ವ್ಯಕ್ತಿತ್ವವನ್ನು ರೂಪಿಸುವವರು ಯಾರು.

ಮಕ್ಕಳು ಶಿಕ್ಷಕರ ನಡುವಿನ ಸಂಬಂಧ ಹೇಗಿರಬೇಕು ಎನ್ನುವುದರ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಬಹುತೇಕ ಅಧ್ಯಯನಗಳು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಿವೆ. ಅದೇನೆಂದರೆ 'ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವಿನ ಪ್ರಬಲ ಭಾವನಾತ್ಮಕ ಸಂಬಂಧವು ಮನೆಯಿಂದ ಹೊರಗಿರುವ ಮತ್ತೊಂದು ಮನೆಯ ಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತದೆ. ಮಕ್ಕಳ ಏಳಿಗೆಯ ಕುರಿತ ಶಿಕ್ಷಕರ ಸಮರ್ಪಣಾಭಾವವು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಹಾಗೂ ನಡವಳಿಕೆಯ ತಳಹದಿಯಲ್ಲಿ ಶಾಲೆಯ ಅವಶ್ಯಕತೆಯನ್ನು ಪೂರೈಸುವ ಮಟ್ಟಕ್ಕೆ ಬೆಳೆಯಲು ನೆರವು ನೀಡುತ್ತದೆ.

ವಿದ್ಯಾರ್ಥಿ-ಶಿಕ್ಷಕರ ನಡುವಿನ ಸಕಾರಾತ್ಮಕ ಸಂಬಂಧ, ಕಲಿಕೆಯ ವೈಫಲ್ಯದಿಂದ ಮಕ್ಕಳನ್ನು ಪಾರು ಮಾಡುತ್ತದೆ. ಅದೇ ರೀತಿ, ಸಂಬಂಧ ಚೆನ್ನಾಗಿಲ್ಲದಿದ್ದರೆ ಮಗು ಎಲ್ಲಾ ವಿಧದಲ್ಲೂ ವೈಫಲ್ಯ ಅನುಭವಿಸಬೇಕಾಗುತ್ತದೆ. ಲಿಂಗ ಸೇರಿದಂತೆ ಹಲವಾರು ಅಂಶಗಳು ಈ ಸಂಬಂಧದಿಂದ ಪ್ರೇರಿತವಾಗಿರುತ್ತದೆ. ಜೊತೆಗೆ ಶಿಕ್ಷಣ ಮತ್ತು ನಡವಳಿಕೆಯಲ್ಲೂ ಸುಧಾರಣೆಗೆ ಉತ್ತಮ ಸಂಬಂಧ ಹಾದಿ ಮಾಡಿಕೊಡುತ್ತದೆ.

ಮಕ್ಕಳು-ಶಿಕ್ಷಕರ ನಡುವಿನ ಸಂಬಂಧ ಭವಿಷ್ಯದಲ್ಲಿ ಮಗುವಿನ ವೈಯಕ್ತಿಕ ಜೀವನದ ಮೇಲೆ ಮಹತ್ವದ ಪ್ರಭಾವ ಬೀರುತ್ತದೆ. ಸಂಬಂಧದಿಂದಲೇ ಮಗು ಜಗತ್ತನ್ನು ಸುತ್ತಲಿನ ಪರಿಸರವನ್ನು ಅರಿಯಲು ಆರಂಭಿಸುತ್ತದೆ. ಈ ಮೂಲಕ ಸಂವಹನ ಕೌಶಲ್ಯ ಬೆಳೆಯುತ್ತದೆ. ಸಂಬಂಧ ಚೆನ್ನಾಗಿದ್ದರೆ ಶಾಲೆಗೆ ಹೋಗುವುದು ಗೋಳು ಎಂದೆನಿಸದೆ ಕಲಿಕೆಯ ಆಸಕ್ತಿ ಹೆಚ್ಚುತ್ತದೆ. ಹೀಗಾಗಿ ಕಲಿಕೆ ಮತ್ತು ಕಲಿಸುವಿಕೆ ಎರಡೂ ಕೂಡ ಈ ಸಂಬಂಧದ ಮೇಲೆ ನಿಂತಿದೆ ಎಂದರೆ ತಪ್ಪಾಗುವುದಿಲ್ಲ.

ಗಾಂಧೀಜಿಯವರ ಪ್ರಕಾರ ವಿದ್ಯೆಯೆಂದರೆ, 'ಮಾನವೀಯತೆಯ ಗಳಿಕೆಯೇ ವಿದ್ಯೆಯ ಗುರಿ. ಸತ್ಯ, ಧರ್ಮದಿಂದ ನಡೆದುಕೊಂಡು ಮನಃಶುದ್ಧಿ, ಕ್ರಿಯಾಶುದ್ಧಿ ಉಳಿಸುವುದು ವಿದ್ಯೆಯ ಫಲವಾಗಿರಬೇಕು. ನಾವು ಕಲಿತ ವಿದ್ಯೆಯಿಂದ ಜೀವನ ಸರಿಯಾಗಿ ನಿರ್ವಹಿಸಲು ಬೇಕಾದ ಚಿಂತನೆಗಳು ಹೊಳೆಯುವಂತಿರಬೇಕು. ಬದುಕಿನಲ್ಲಿ ಸೃಜನಶೀಲತೆ

ಮಾಡುವಂತಿರಬೇಕು ಒಳಿತು, ಕೆಡುಕುಗಳ ಬಗ್ಗೆ ಅರಿವು ವಿದ್ಯೆಯಿಂದ ದೊರಕಬೇಕು. ಪಡೆದ ವಿದ್ಯೆಯು ನಿಮ್ಮಲ್ಲಿ ಸದಾಚಾರ, ನ್ಯಾಯಪರತೆ, ಸಾಮಾಜಿಕ ಹೊಂದಾಣಿಕೆ, ಸ್ನೇಹ, ಕರುಣೆ ಮುಂತಾದ ಮೌಲ್ಯಗಳನ್ನು ವರ್ಧಿಸಿ. ರಾಷ್ಟ್ರದ ಸರ್ವಾಂಗೀಣ ಉನ್ನತಿಗೆ ಅನುಕೂಲವಾಗುವಂತಿರಬೇಕು. ನಿಜವಾದ ವಿದ್ಯೆ ಮಾನವನ ವ್ಯಕ್ತಿತ್ವವನ್ನು ವಿಕಸಿತಗೊಳಿಸುವಂತಿರಬೇಕು. ಅನ್ಯಾಯ, ಮೋಸ, ವಂಚನೆ ಇತ್ಯಾದಿ ವೈರಗುಣಗಳನ್ನು ಮೆಟ್ಟಿ ಬಾಳ್ವೆ ಮಾಡುವಂತಿರಬೇಕು.

ಇತ್ತೀಚಿಗೆ ಪ್ರತಿ ದಿನವೂ ಮಾಧ್ಯಮಗಳಲ್ಲಿ ಕೇಳಿ ಬರುತ್ತಿರುವ ಅನೀತಿ, ಅನೈತಿಕ ಹಾಗೂ ಅನಾಚಾರಗಳ ಸುದ್ದಿಗಳಿಂದಾಗಿ ಇಡೀ ಮಾನವ ಸಮಾಜವೇ ತಲೆ ತಗ್ಗಿಸುವಂತಾಗಿದೆ. ಇಂತಹ ಕೃತ್ಯಗಳಿಂದಾಗಿ. ಸತ್ಯ, ಅಹಿಂಸೆ, ದಯೆ, ಕರುಣೆ, ಭಕ್ತಿ, ವಿನಯ, ಪ್ರೀತಿ, ಭ್ರಾತೃತ್ವ, ವಿಶ್ವಾಸಕ್ಕೆ ಹೆಸರಾಗಿ ಸುಸಂಸ್ಕೃತರೆಂದು ಹೆಮ್ಮೆಯಿಂದ ಬೀಗುತ್ತಿದ್ದ ನಾಡಿನ ಸಂಸ್ಕೃತಿಗೆ ಕಳಂಕ ತಗುಲಿದೆ. ಇದು ನವನಾಗರೀಕತೆಯ ಬೆನ್ನು ಹತ್ತಿ ಆಧುನಿಕನೆಂದು ಬೀಗುತ್ತಿರುವ ಮನುಷ್ಯ ನೈತಿಕತೆಯನ್ನೇ ಕಳೆದುಕೊಳ್ಳುತ್ತಿದ್ದಾನೆ. ಸುಶಿಕ್ಷಿತರೆನಿಸಿಕೊಂಡವರಿಂದಲೇ ಇದೆಲ್ಲಾ ನಡೆಯುತ್ತಿರುವುದು ನಮ್ಮ ಭವ್ಯ ಸಂಸ್ಕೃತಿಯ ಮೇಲಾಗುತ್ತಿರುವ ಘೋರ ಅನ್ಯಾಯ. ಅದರಲ್ಲೂ ಇತ್ತೀಚಿಗೆ ಇಡೀ ಸಮಾಜದಲ್ಲಿ ಅಶ್ಲೀಲತೆ, ಅನೈತಿಕತೆ, ಅತ್ಯಾಚಾರ ಹಾಗೂ ಅನಾಚಾರಗಳು ನಡೆಯುತ್ತಿವೆ. ಯಾರೋ ತಿಳುವಳಿಕೆಯಿಲ್ಲದ ಮೂಢನಿಂದ ಇಂತಹ ಅಚಾತುರ್ಯಗಳು ನಡೆಯುತ್ತಿವೆ ಎಂದರೆ ಅಂತಹ ವ್ಯಕ್ತಿಗೆ ತಿಳುವಳಿಕೆ ನೀಡಬಹುದು. ಆದರೆ ಇಂದು ಎಲ್ಲ ಕೃತ್ಯಗಳು ಅತಿಹೆಚ್ಚು ವಿದ್ಯಾವಂತರೆನಿಸಿಕೊಂಡವರಿಂದಲೇ ವಯೋಮಾನ ಬೇದವಿಲ್ಲದೆ ನಡೆಯುತ್ತಿರುವುದು ನಿಜಕ್ಕೂ ಅಪರಾಧ. ಸರಸ್ವತಿಯ ದೇಗುಲಗಳೂ ಕೆಲವು ಮಂದಿ ನೀತಿಗೆಟ್ಟವರಿಂದ ತಮ್ಮ ಪಾವಿತ್ರ್ಯತೆಯನ್ನು ಕಳೆದುಕೊಳ್ಳುತ್ತಿರುವುದು ನೋವಿನ ಸಂಗತಿಯಾಗಿದೆ.

ಮಕ್ಕಳನ್ನು ಹೆರುವುದಷ್ಟೇ ಪೋಷಕರ ಜವಾಬ್ದಾರಿಯಾಗಿರುವುದಿಲ್ಲ. ಅವರಲ್ಲಿ ಉತ್ತಮ ನಡತೆಯನ್ನು ತುಂಬಿ ಸಮಾಜಕ್ಕೆ ಒಬ್ಬ ಸತ್ಪ್ರಜೆಯನ್ನಾಗಿ ಮಾಡಿದಾಗ ಆತನಿಂದಾದ ಸಮಾಜ ಕಲ್ಯಾಣ ಕಾರ್ಯಗಳನ್ನು ಮನಗಂಡಂತಹ ಜನರು ಈತನು ಯಾವ ಮಹಾತಾಯಿ ಹೆತ್ತ ಮಗನೋ ನೂರ್ಕಾಲ ಸುಖವಾಗಿರಲಿ ಎಂದು ಹರಸಿ ಹಿತ ನುಡಿದ ಮಾತುಗಳು ಹೆತ್ತವರ ಕಿವಿಯ ಮೇಲೆ ಬಿದ್ದಾಗ ಅವರು ಸಂತೋಷಗೊಂಡು ನಮ್ಮ ಮಗನನ್ನು ಹೆತ್ತಿರುವುದಕ್ಕೆ ನಮ್ಮ ಜೀವನ ಸಾರ್ಥಕವಾಯಿತೆಂದು ಹರ್ಷಪಡುತ್ತಾರೆ. ಈ ತೆರನಾಗಿ ನಾವು ಮಕ್ಕಳನ್ನು ಮನೆಯ ನಂದಾದೀಪವಾಗಿ ಬೆಳೆಸಬೇಕಾಗುತ್ತದೆ.


ಹುಟ್ಟಿನೊಂದಿಗೆ ರಂಗದ ಪರದೆ ಮೇಲೆದ್ದು, ಸಾವಿನೊಂದಿಗೆ ಪರದೆ ಇಳಿಯುವುದರಲ್ಲಿ ಮುಕ್ತಾಯವಾಗುವ ಜೀವನ ನಾಟಕದಲ್ಲಿ ನಿರ್ವಹಿಸಬೇಕಾದ ಪಾತ್ರ, ಅದರ ನಡೆ, ಅವಸ್ಥೆ, ಭವಭವ್ಯ...... ಎಲ್ಲಾ ವಿವರವನ್ನು ಮನುಷ್ಯ ತನ್ನ ಬಾಲ್ಯಾವಸ್ಥೆಯಲ್ಲಿಯೇ ರೂಪಿಸಿಕೊಂಡು ತನ್ನ ಜೀವನ ನಾಟಕದ ಸ್ಕ್ರಿಪ್ಟ್ ಸಿದ್ಧಪಡಿಸಿಕೊಂಡಿರುತ್ತಾನೆ ಎನ್ನುವುದು ಡಾ. ಎರಿಕ್‌ಬರ್ನ್ ವಾದ.

ಶೈಕ್ಷಣಿಕ ಜೀವನದ ಎರಡು ಅಮೂಲ್ಯ ವರ್ಷಗಳನ್ನು ಮಕ್ಕಳು ಕಳೆದುಕೊಂಡಿದ್ದಾರೆ, ಕಳೆದುಕೊಂಡಿರುವುದನ್ನು ಸರಿದೂಗಿಸುವುದು ಅಷ್ಟು ಸುಲಭವಲ್ಲ. ಹಾಗೆಯೇ ಸರಿದೂಗಿಸುವುದು ಅಸಾಧ್ಯವೇನು ಅಲ್ಲ....!

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಡೆಸಿದ ಸಮೀಕ್ಷೆಯಲ್ಲಿ ಮಕ್ಕಳ ಕಲಿಕೆಯಲ್ಲಿ ಹೆಚ್ಚು ಹಿನ್ನಡೆಯಾಗಿರುವುದು ಈಗಾಗಲೇ ಬಹಿರಂಗವಾಗಿದೆ. ಅಲ್ಲದೇ ಮಕ್ಕಳ ಪಾಲಕರು, ಶಿಕ್ಷಕರಿಗೂ ಇದರ ಬಗ್ಗೆ ತಿಳಿದಿದೆ ಹೀಗಾಗಿ, ಕಲಿಕಾ ಹಿನ್ನೆಡೆ ಸರಿದೂಗಿಸಬೇಕಾಗಿದೆ ಶಿಕ್ಷಣ ಇಲಾಖೆಯ ಈ ಪ್ರಯತ್ನದಲ್ಲಿ ಶಿಕ್ಷಕರು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಅಗತ್ಯವಾಗಿದೆ. ಶಿಕ್ಷಕರು ಈ ಶೈಕ್ಷಣಿಕ ವರ್ಷವನ್ನು ವಿಶೇಷ ಮತ್ತು ಅತ್ಯಂತ ಮುಖ್ಯವಾದ ವರ್ಷವೆಂದು ಪರಿಗಣಿಸಿ ವಿಶೇಷ ಆಸಕ್ತಿಯಿಂದ ಭೋಧನೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ.



# ಕನಕದಾಸರು



ಡಾ. ಗುರುರಾಜ ಪೋಶೆಟ್ಟಿಹಳ್ಳಿ, (ಪ್ರಣವ) ಸಂಸ್ಕೃತಿ ಚಿಂತಕರು

ಕನಕ ಎಂದರೆ ಬಂಗಾರ– ಹೊಂಬಣ್ಣದ ಅಪ್ಪಟ ಚಿನ್ನ. ಹೆಸರಿಗೆ ತಕ್ಕಂತೆ ಕನಕದಾಸರು ಪರಿಶುದ್ಧ ಬಂಗಾರವೇ. ಅವರಿದ್ದ ಕಾಲವೂ ಅಷ್ಟೇ, ಕರ್ನಾಟಕದ ಇತಿಹಾಸದಲ್ಲಿ ಸುವರ್ಣಯುಗವಾಗಿದ್ದ ವಿಜಯನಗರ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲ. ಆ ಸಾಮ್ರಾಜ್ಯವನ್ನು ಶ್ರೀಕೃಷ್ಣದೇವರಾಯ ಮತ್ತು ಅಚ್ಯುತರಾಯರು ಆಳುತ್ತಿದ್ದ ಕಾಲ. ಹಂಪೆಯ ಬೀದಿ ಬೀದಿಗಳಲ್ಲಿ ಮುತ್ತು ರತ್ನಗಳನ್ನು ಮಾರುತ್ತಿದ್ದ ಕಾಲ. ಅಷ್ಟೇ ಅಲ್ಲ ಯತಿಶ್ರೇಷ್ಠರೆನಿಸಿದ ಶ್ರೀ ವ್ಯಾಸರಾಜರು, ಶ್ರೀ ವಾದಿರಾಜರುಗಳು ಪೀಠಸ್ಥರಾಗಿದ್ದು ನಾಡನ್ನು ಧರ್ಮದ ಸುವರ್ಣ ಪಥದಲ್ಲಿ ನಡೆಯಿಸುತ್ತಿದ್ದ ಕಾಲ. ಕರ್ನಾಟಕ ಸಂಗೀತ ಪಿತಾಮಹ ಪುರಂದರದಾಸರು ದಾಸ ಸಾಹಿತ್ಯದಿಂದ ಗಾಯನ ಗಂಗೆಯನ್ನು ಹರಿಸುತ್ತಿದ್ದ ಸ್ವರ್ಣ ಸಮಯ.

ಕನಕದಾಸರು ನಾಲ್ಕು ಕಾವ್ಯ ಕೃತಿಗಳನ್ನು, ಸುಮಾರು ಮೂರು ನೂರು ಕೀರ್ತನೆಗಳನ್ನು ರಚಿಸಿರುತ್ತಾರೆ. ಅವರ ನಾಲ್ಕೂ ಕಾವ್ಯಗಳು ಶೃಂಗರ, ವೀರ, ಕರುಣ ಇತ್ಯಾದಿ ರಸಗಳಿಂದ ಕೂಡಿ ಓದುಗರಿಗೆ ಸಾಹಿತ್ಯ ಸುಧೆಯನ್ನು ಉಣಬಡಿಸುತ್ತವೆ. ಆ ಕೃತಿಗಳೇ ಮೋಹನ ತರಂಗಿಣಿ, ನಳ ಚರಿತ್ರೆ, ರಾಮ ಧ್ಯಾನ ಚರಿತೆ ಮತ್ತು ಹರಿಭಕ್ತಿಸಾರ.

ಮೋಹನ ತರಂಗಿಣಿ ಶೃಂಗಾರ ಕಾವ್ಯ. ಶ್ರೀಕೃಷ್ಣ–ರುಕ್ಮಿಣಿ, ಅವನ ಪುತ್ರರಾದ ಮನ್ಮಥ, ಪ್ರದ್ಯುನ್ನ ಸೊಸೆಯಿಂದಿರಾದ ರತಿ, ಉಷೆ ಇವರುಗಳ ಸರಸ ಪ್ರಸಂಗಗಳ ಸೊಗಸಾದ ನಿರೂಪಣೆ. ಬರು ಪ್ರೇಮ ಪ್ರಸಂಗಗಳಷ್ಟೇ ಅಲ್ಲ, ಅನೇಕ ಯುದ್ಧ ಪ್ರಸಂಗಗಳಾದ ಶಂಬಾಸುರನ ವಧೆ, ಬಾಣಾಸುರನ ವಧೆ, ಹರಿಹರ ಯುದ್ಧ ವರ್ಣನೆಗಳೂ ರೌದ್ರ ರಸಮಯವಾಗಿ ಮೂಡಿಬಂದಿವೆ. ವಿಜಯನಗರದ ವೈಭವವನ್ನು ಕಣ್ಣಾರೆ ಕಂಡ ಕನಕದಾಸರು ದ್ವಾರಕಾಪುರಿಯನ್ನು ಆ ಹಿನ್ನೆಲೆಯಲ್ಲಿಯೇ ವರ್ಣಿಸುತ್ತಾರೆ. ಆ ನಗರದ ರಾಜ ವೈಭವ, ಅಲ್ಲಿಯ ಉದ್ಯಾನವನಗಳು, ನವರಾತ್ರಿಯ ಸಂಭ್ರಮ, ಅಂತಃಪುರದ ಜಲಕ್ರೀಡೆ – ಇತ್ಯಾದಿ ಅಂಶಗಳು ದ್ವಾರಕಾ ನಗರಿಗೆ ಅನ್ವಯಿಸುವಂತೆ ಸುಂದರವಾಗಿ ನಿರೂಪಿತವಾಗಿವೆ. ಈ ಕಾವ್ಯದ ಸಾಂಗತ್ಯದ 2700 ಪದ್ಯಗಳು 42 ಸಂಧಿಗಳಲ್ಲಿ ಅಡಕವಾಗಿವೆ. ಪ್ರೇರಣೆ ಇರಬೇಕು.

ಮಹಾಭಾರತದ ಅರಣ್ಯ ಪರ್ವದಲ್ಲಿ ಬರುವ ನಳ–ದಮಯಂತಿಯರ ಪ್ರೇಮ ಕಥೆ ಯಾರಿಗೆ ಗೊತ್ತಿಲ್ಲ? ಅವರಿಬ್ಬರ ಪ್ರೇಮ ಸಂದೇಶಗಳು ಹಂಸದ ಮೂಲಕವೆ. ಈ ಕಥಾನಕವನ್ನು ಮನೋಜ್ಞವಾಗಿ ಪ್ರೌಢತೆಯಿಂದ ಹೇಳಿರುವ ಕನಕ ಕವಿಯ ನಳ ಚರಿತ್ರೆ ಒಂದು ಅದ್ಭುತ ಭಾಮಿನಿ ಷಟ್ಪದಿ. 9 ಸಂಧಿಗಳು, 481 ಪದ್ಯಗಳಿರುವ ಈ ಕೃತಿ ಮಧುರ ಅತಿ ಮಧುರ. ಲಲಿತ ಹೇಮದ ತೂಗು ಮಂಚದಲ್ಲಿ ಮಲಗುತ್ತಿದ್ದ ದಮಯಂತಿಗೆ ಅರಣ್ಯದಲ್ಲಿ ಹರಕು ಸೀರೆಯ ಮೇಲೆ ಮಲಗುವ ದೌರ್ಭಾಗ್ಯ. ವಿಧಿ ಲಿಖಿತವನ್ನು ಮೀರುವವರಾರು? ಯರ ಮನಸನ್ನದರೂ ಕಲಕುವ ಕರುಣ ರಸದ ಅತ್ಯುತ್ತಮ ನಿರೂಪಣೆ ಕನಕರ ಪ್ರತಿಭೆಗೆ ಸಾಕ್ಷಿಯಂತಿದೆ.

ಬಡತನ–ಸಿರಿತನ, ಬಡವ–ಬಲ್ಲಿದ ಸಮಾಜದ ದೊಡ್ಡ ಪಿಡುಗು. ಎಲ್ಲಿಯವತರವಿಗೆ ಮಾನವನ ಹಿರಿಮೆಯನ್ನು ಹಣದ ಮಾನದಂಡದ ಮೇಲೆ ಅಳೆಯುವೆವೋ ಅಲ್ಲಿಯವರೆವಿಗೆ ಸರ್ವ ಸಮಾನತೆ ಎಂಬುದು ಭ್ರಮೆ. ಇದನ್ನು

ಹಿರಿಮೆಯನ್ನು ಗುಣದಿಂದ ಗುರುತಿಸಬೇಕೆಂಬ ಆಶಯದಿಂದ ರಚಿಸಿದ ಭಾಮಿನೀ ಷಟ್ಪದಿ 'ರಾಮ ಧ್ಯಾನ ಚರಿತೆ' 156 ಪದ್ಯಗಳ ಈ ಕೃತಿಯ ನಾಯಕ –ಪ್ರತಿ ನಾಯಕರು ರಾಗಿ ಮತ್ತು ಅಕ್ಕಿ. ರಾಗಿ ಬಡವನ ಧ್ಯಾನ. ಅಕ್ಕಿ ಶ್ರೀಮಂತಿಕೆಯ ಪ್ರತೀಕ. ಇವರಿಬ್ಬರಲ್ಲಿ ಯಾರು ಶ್ರೇಷ್ಠರು? ಶ್ರೀಮಂತರ ಮನೆಯಲ್ಲಿ ಬೆಳ್ಳಿಯ ಹರಿವಾಣದಲ್ಲಿ ಮುತ್ತುಗಳಂತೆ ಪಳ ಪಳ ಹೊಳೆಯುವ ಅನ್ನವೋ ಅಥವಾ ಬಡವರ ತರಗೆಲೆಯ ತಾಟಿನಲ್ಲಿ ಕರಿಮುದ್ದೆಯಾಗಿ ಕೂತಿರುವ ರಾಗಿ ಹಿಟ್ಟೋ? ಮೇಲ್ನೋಟಕ್ಕೆ ಅನ್ನವೇ ಶ್ರೇಷ್ಠವೆಂದೆನಿಸಿದರೂ ಆರೋಗ್ಯದ ದೃಷ್ಟಿಯಿಂದ ವಿಚಾರ ಮಾಡಲಾಗಿ ಅಕ್ಕಿಗಿಂತ ರಾಗಿ ಮೇಲುಗೈ ಸಾಧಿಸುತ್ತದೆ. ಅಕ್ಕಿ–ರಾಗಿಯ ಸಂಭಾಷಣೆ ಬಲ್ಲಿದ–ಬಡವರ ಭಾಷೆಯ ಸಂಕೇತವಾಗಿದ್ದು, ತೀರ್ಪು ಕೊಡುವ ದೈವ ಬಂದಾಗ ರಾಗಿ 'ರಾಮ ಧ್ಯಾನ' ವೆನಿಸುತ್ತದೆ. ಕನಕದಾಸರ ಕಳಕಳಿ ಯಾವ ಶ್ರೀಮಂತರಿಗಾದರೂ ಆದರ್ಶಪ್ರಾಯವಾಗಿದೆ. ಶ್ರೀಮಂತಿಕೆಯನ್ನು ಗುರಿತಿಸುವ ಹೊಸ ಮಾನದಂಡವನ್ನೇ ರೂಪಿಸಿದ್ದಾರೆ, ಕನಕರು ತಮ್ಮ ಈ ಚರಿತೆಯಲ್ಲಿ.

ಇನ್ನು 'ಹರಿಭಕ್ತಿಸಾರ', ಅವರ ಇನ್ನೊಂದು ಭಾಮಿನಿ ಷಟ್ಪದಿ ಕಾವ್ಯ. ಶ್ರೀಹರಿಯ ಹಿರಿಮೆಯನ್ನು ನೂರ ಹತ್ತು ಪದ್ಯಗಳಲ್ಲಿ ಹಾಡಿ ಹೊಗಳಿರುವ ಈ ಕೃತಿ ಸರಳ ಪದಪುಂಜಗಳಿಂದ ಓದುಗರ ಮೆಚ್ಚುಗೆ ಪಡೆಯುತ್ತದೆ. ಕನಕರು ಕವಿಯೋ, ಸಮಾಜ ಸುಧಾರಕರೋ, ಹರಿದಾಸರೋ ಅಥವಾ ಇಂದಿನ ದಲಿತ ಸಾಹಿತ್ಯದ ಪ್ರಪಿತಾಮಹರೋ ಎಂಬ ಸಂದೇಹ ಬಿಡಿ ಬಿಡಿಯಾಗಿ ಈ ಕಾವ್ಯಗಳನ್ನು ಓದುವವರಿಗೆ ಬರಲಿಕ್ಕೆ ಸಾಕು. ಅವರು ಎಲ್ಲವೂ ಹೌದು ಎಂಬುದು ಈ ಕಾವ್ಯಗಳ ಸಮಗ್ರ ಓದಿನಿಂದ ಮೂಡುವ ಏಕಾಭಿಪ್ರಾಯವಾಗಿದೆ.

ಅವರ ಕೀರ್ತನೆಗಳು, ಸುಳಾದಿಗಳು ಮತ್ತು ಮುಂಡಿಗೆಗಳೂ ಅಷ್ಟೇ ಬಹಳ ಅರ್ಥಗರ್ಭಿತ. ಜಾನಪದ ಭಾಷೆಯ ಸೊಗಡು, ಅನನ್ಯ ಭಕ್ತಿ, ನೇರ ನುಡಿಗಳ ಜೊತೆ– ಜೊತೆಯಲ್ಲಿಯೇ ಅಲ್ಲಲ್ಲಿ ಉಪಮೆಗಳು, ಒಗಟಿನಂತಹ ಶಬ್ದಗಳು ಬೆರೆತು, ಆಳಕ್ಕೆ ಇಳಿದಷ್ಟೂ ಅಧಿಕ ಸ್ವಾದಿಷ್ಟ.

ಸಮಾಜ ಸುಧಾರಣೆಯಲ್ಲಿ ಕನಕದಾಸರ ಪ್ರಯತ್ನ ತುಂಬ ಗಮನಾರ್ಹ. ಸಮಾಜದ ಮೇಲು–ಕೀಳು ವರ್ಗದಲ್ಲಿನ ಅಸಮಾನತೆಯನ್ನು ಹೋಗಲಾಡಿಸಿ ಬಡವರಿಗೂ ಗೌರವದ ಸ್ಥಾನ ದೊರಕಿಸಿಕೊಟ್ಟ ಹೆಗ್ಗಳಿಕೆ ಅವರದು. ಬಡವರ ಆಹಾರ 'ರಾಗಿ'ಯ ಸಂಕೇತದ ಮೂಲಕ ಆ ಜನತೆಯ ಶ್ರಮದ ಹಿರಿಮೆಯನ್ನು ಶ್ರೀಮಂತರಿಗೆ ಮನವರಿಕೆ ಮಾಡಿಕೊಟ್ಟು ಅವರು ಸಮಾಜದ ಅವಿಭಾಜ್ಯ ಪ್ರಧಾನ ಅಂಗ ಎಂದು ಸಾರಿ ಸಾರಿ ಹೇಳಿ ಬಡವರಿಗಿದ್ದ ಕೀಳರಿಮೆಯನ್ನು ತೊಡೆದು ಹಾಕಿದವರು ಅವರು. ಅಷ್ಟೇ ಅಲ್ಲ ತಮ್ಮದೇ ಜನಾಂಗದವರು ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಕೊಡುತ್ತಿದ್ದ ಪ್ರಾಣಿ ಬಲಿಯನ್ನು ಖಂಡಿಸಿ ಅದನ್ನು ನಿಲ್ಲಿಸಲು ನೆರವಾದರು. ಮದ್ಯದ ಸೇವನೆ ಅಪಾಯಕಾರಿ, ಮಾಂಸದ ಸೇವನೆ ಅನಾವಶ್ಯಕ, ಜೂಜು ವಿನಾಶಕಾರಿ– ಹೀಗೆ ಅನೇಕ ಸದ್ಭಾವನೆಗಳನ್ನು ದಲಿತ ವರ್ಗದವರಲ್ಲಿ ಪ್ರಚುರ ಪಡಿಸಿ ಆ ಜನರಲ್ಲಿ ಮೂಡಿದ್ದ, ತಳವೂರಿದ್ದ ಮೂಢನಂಬಿಕೆಗಳಿಗೆ ಅಂತ್ಯ ಹಾಡಲು ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಮುಸಲ್ಮಾನರ – ಹಿಂದೂಗಳ ಬಿಡಿದಾಟ ಒಂದೆಡೆಯಾದರೆ, ಬ್ರಾಹ್ಮಣ – ವೀರಶೈವರ ಜಗಳ ಮತ್ತೊಂದೆಡೆ. ಮುಸಲ್ಮಾನರಾಗಲಿ, ಹಿಂದೂಗಳಾಗಲಿ ದಲಿತರು ದಲಿತರೆ. ಅವರಿಗೆ ತಮ್ಮದೇ ಮತದ ಸಿರಿವಂತರ ಬೆಂಬಲ ಎಂದಿಗೂ ಇಲ್ಲ. ಅಂತಹ ದಲಿತರನ್ನು ಕಾಡುತ್ತಿರುವ ಅಜ್ಞಾನ ಹೋಗುವ ಹೊರತು ಅವರ ಏಳಿಗೆ ಸಾಧ್ಯವಿಲ್ಲ ಎಂದರಿತ ದಾಸರು ಅವರ ಕೇರಿಗಳಿಗೆ ಹೋಗಿ ಕವಿ ಕಾವ್ಯಗಳನ್ನು ವಾಚನ ಮಾಡುತ್ತಾ ಅವರ ಅಭಿರುಚಿಯನ್ನು ಕೆಳ ಸ್ತರದಿಂದ ಎತ್ತರಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡುತ್ತಾರೆ. ಅಂತ್ಯಜರನ್ನು ಹೀನಾಯವಾಗಿ ಕಾಣುತ್ತಿದ್ದು ತಮ್ಮದು ಮೇಲು ಜಾತಿಯೆಂದು ಬೀಗುತ್ತಿದ್ದವರನ್ನು ತಿದ್ದಲು ಕಾಯಾ ವಾಚಾ ಮನಸಾ ಶ್ರಮಿಸುತ್ತಾರೆ. ದೇವದಾಸಿ ಪದ್ಧತಿ ನಿರ್ಮೂಲನವೂ ಅವರ ಕೊಡುಗೆಯೆ. ಕನಕದಾಸರು ನಾಯಕ ಮನೆತನದವರಾದುದರಿಂದ ಆ ಕುಲ ಕ್ಷಾತ್ರ ತೇಜಸ್ಸನ್ನು ಹೊಂದಿದ್ದವರು. ಭುಜಬಲದಲ್ಲಿ, ಪರಾಕ್ರಮದಲ್ಲಿ, ದೇಹದಾರ್ಢ್ಯದಲ್ಲಿ ಯಾರಿಗೂ ಕಡಿಮೆ ಇದ್ದವರಲ್ಲ. ಆದರೂ ಅವರು ವ್ಯಾಸರಾಜರ ಸಂಪರ್ಕಕ್ಕೆ ಬಂದ ಮೇಲೆ ಸಂಪೂರ್ಣ ಹರಿದಾಸರಾಗುತ್ತಾರೆ. ಭಕ್ತಿ ಪಂಥದ ಹರಿಕಾರರಾಗಿ ತಿರುಪತಿ, ಉಡುಪಿ, ಕಾಗಿನೆಲೆ, ಬೇಲೂರು ಮುಂತಾದ ಸ್ಥಳಗಳಲ್ಲಿ ಪ್ರವಾಸ ಮಾಡುತ್ತಾರೆ. ಅವರ ವೈಷ್ಣವ ಭಕ್ತಿ ಶ್ರೀ ವಾದಿರಾಜರ, ಪುರಂದರದಾಸರ, ಬೇಲೂರು ವೈಕುಂಠದಾಸರ ಸಂಪರ್ಕಕ್ಕೆ ಎಡೆಮಾಡಿಕೊಡುತ್ತದೆ. ಪೀಠಾಧಿಪತಿಗಳ ಆಪ್ತ ಸಂಪರ್ಕವಿದ್ದರೂ ಅವರೆಂದೂ ಅದನ್ನು ದುರುಪಯೋಗಪಡಿಸಿಕೊಂಡವರಲ್ಲ. ಪ್ರಪತ್ತಿಯ ಜೀವಾಳ ಸಂಪೂರ್ಣ ಶರಣಾಗತಿ, ದಾಸತ್ವ ಎಂದು ನಂಬಿದ್ದ ಅವರು

ಅನ್ಯ ಕುಲದವರ ಆಚಾರ ವಿಚಾರಗಳಿಗೆ ಗೌರವ ಕೊಡುತ್ತಿದ್ದವರು.

ಕನಕದಾಸರು ಎಲ್ಲರ ಮೆಚ್ಚುಗೆಗೆ ಪಾತ್ರರಾಗುವುದು ಅವರ ಸರಳತೆ ಮತ್ತು ವಿನಯಶೀಲತೆಗಳಿಂದ. ಶ್ರೇಷ್ಠ ಮಟ್ಟದ ಹರಿದಾಸರು ಅನುಭವಿಗಳೂ ಆಗಿದ್ದರೂ, ಅವರು ತಮ್ಮನ್ನು ಕರೆದುಕೊಳ್ಳುವುದು ಹೀಗೆ:



ಹಲವು ದಾಸರ ಮನೆಯ ಹೊಲೆಯ ದಾಸನು ನಾನು

ಕುಲವಿಲ್ಲದ ದಾಸ ಕುರುಬ ದಾಸ

ಛಲದಿ ನಿನ್ನ ಭಜಿಪರ ಮನೆಯ ಮಾದಿಗ ದಾಸ

ಸಲೆ ಮುಕ್ತಿ ಪಾಲಿಸೆನ್ನೊಡೆಯ ಕೇಶವನೆ



ಇಂತಹ ದಾಸರು ತಮ್ಮ 'ಹರಿಭಕ್ತಿಸಾರ'ದಲ್ಲಿ ಭಗವಂತನನ್ನು ಸುತ್ತಿಸುವುದು ಅತ್ಯಂತ ಜನಪ್ರಿಯ ಪದ್ಯವಾಗಿದ್ದು ನಿತ್ಯ ಪ್ರಾರ್ಥನೆಯಾಗಿದೆ. ಆ ಪದ್ಯ ನಮ್ಮೆಲ್ಲರ ಅನುಕ್ಷಣದ ಉಸಿರಾಗಿರಲಿ:

ದೀನ ನಾನು ಸಮಸ್ತ ಲೋಕಕೆ

ದಾನಿ ನೀನು ವಿಚಾರಿಸಲು ಮತಿ

ಹೀನ ನಾನು ಮಹಾಮಹಿಮ ಕೈವಲಪತಿ ನೀನು

ಏನ ಬಲ್ಲೆನು ನಾನು ನೆರೆಸು

ಜ್ಞಾನ ಮೂರುತಿ ನೀನು ನಿನ್ನ ಸ

ಮಾನರುಂಟೆ ದೇವ ರಕ್ಷಿಸು ನಮ್ಮನನವರತ

ದಾಸಸಾಹಿತ್ಯಕ್ಷೇತ್ರದ ಎರಡು ಶಿಖರಪ್ರಾಯ ಪ್ರತಿಭೆಗಳೆಂದರೆ ಪುರಂದರ ಹಾಗೂ ಕನಕರು. ಕನಕರು ಅಪೂರ್ವ ಒಳನೋಟಗಳಿಂದ ರಚಿಸಿದ ಕೃತಿಗಳು ಇಂದಿಗೂ ಜನಸಾಮಾನ್ಯರ ನಾಲಗೆಯ ಮೇಲೆ ನಲಿದಾಡುತ್ತಿವೆ. ಕನಕ ಜಯಂತಿಯ ಈ ಸಂಧರ್ಭದಲ್ಲಿ ಅವರ ರಚನೆಯಗಳ ಹಿಂದಿನ ತಾತ್ತ್ವಿಕತೆಯ ಹುಡಕಾಟದ ಬರಹ ಇಲ್ಲಿದೆ.

ಕನಕರ ಮಾತುಗಳು ನಮ್ಮ ಮುಂದಿವೆ; ಅವರ ಬದುಕೂ ಕಥೆಯಾಗಿ ನಮ್ಮ ಮುಂದಿದೆ. ಅವರ ಮಾತು ಕಥೆಗಳ ಮೂಲಕ ನಾವು ಸ್ಪರ್ಶಿಸಬಹುದಾದ ಸತ್ಯದ ಜಗತ್ತು ಯಾವುದು? ಬದುಕಿನ ಯಾವ ವಿನ್ಯಾಸವನ್ನು ಅವರು ಕಟ್ಟಿಕೊಂಡರು ಹಾಗೂ ಕಟ್ಟಿ ಕೊಟ್ಟರು? ಈ ಪ್ರಶ್ನೆಗಳು ನಮ್ಮ ಮುಂದಿವೆ. ಕನಕರ ಅರಿವಿನಲ್ಲಿ ನಮ್ಮ ಅರಿವೂ ಇದೆ. ಹೀಗಾಗಿ ಕನಕರನ್ನು ಕುರಿತ ಅರಿವೆಂದರೆ ಅದು ಸ್ವಯಂ ನಮ್ಮನ್ನು ಕುರಿತ ಅರಿವೂ ಆಗಿದೆ. ಈ ಅರ್ಥದಲ್ಲಿ ಕನಕರ ಇತಿಹಾಸದಲ್ಲಿ ನಮ್ಮ ಸಮಕಾಲೀನತೆಯೂ ಇದೆ.

ನಾಯಕತ್ವದಿಂದ ದಾಸ್ಯತ್ವದ ಕಡೆಗೆ ಹೊರಳಿದ್ದರಲ್ಲಿ ಕನಕರ ಬದುಕಿನ ವಿನ್ಯಾಸವಲ್ಲದೆ ತಾತ್ತ್ವಿಕತೆಯ ವಿನ್ಯಾಸವೂ ಇದೆ. ಅವರ ಪ್ರಕಾರ ದಾಸನಾಗುವುದೆಂದರೆ ಬಯಲಿಗೆ ಬಂದು ನಿಲ್ಲುವುದು. ಈ



## ಮನೆ ಮದ್ದು
## ಸಕ್ಕರೆ ಮತ್ತು ಬೆಣ್ಣೆ

ದಿನದ ಯಾವುದಾದರೂ ಸಮಯದಲ್ಲಿ ಊಟಕ್ಕೆ ಮುಂಚೆ ಖಾಲಿ ಹೊಟ್ಟೆಯಲ್ಲಿ ಮೊದಲು ಸಕ್ಕರೆ ಮತ್ತು ಬೆಣ್ಣೆಯ ಮಿಶ್ರಣವನ್ನು ಸೇವನೆ ಮಾಡಿ ನಂತರ ಆಹಾರ ಸೇವನೆ ಮಾಡುವುದರಿಂದ ಕೇವಲ ಒಂದು ತಿಂಗಳಲ್ಲಿ ನಿಮ್ಮ ದೇಹದ ತೂಕ ಹೆಚ್ಚಾಗುವುದು ಮಾತ್ರವಲ್ಲದೆ ಮೊದಲಿಗಿಂತ ನೀವು ದಪ್ಪ ಕೂಡ ಆಗುವಿರಿ.

ಪ್ರಕ್ರಿಯೆಯಲ್ಲಿ ಸಹಜವಾಗಿಯೇ ಆಲಯಗಳೆಲ್ಲವೂ, ಅವುಗಳ ಎಲ್ಲ ಆಯಾಮಗಳೊಂದಿಗೆ, ನಿರಾಕರಣೆಗೆ ಒಳಗಾಗುತ್ತವೆ. ಇದು ಕನಕರ ತಾತ್ತ್ವಿಕತೆಯ ಆಧಾರಶ್ರುತಿಯೇ ಆಯಿತೆನ್ನಬೇಕು.

ಆಲಯದಿಂದ ಹೊರಬರುವ ಪ್ರಕ್ರಿಯೆ ತನ್ನ ಸ್ವಂತ ಶರೀರದಿಂದಲೇ ಪ್ರಾರಂಭವಾಗುತ್ತದೆ. 'ಏಸೋ ಕಾಯಂಗಳ ಕಳೆದು ಎಂಬತ್ನಾಲ್ಕು ಲಕ್ಷ ಜೀವ/ ರಾಶಿಯನ್ನು ದಾಟಿಬಂದ ಈ ಶರೀರ ತಾನಲ್ಲ ತನ್ನದಲ್ಲ' ಎಂಬ ಮಾತು ಶರೀರವನ್ನು ಬೇರೋಂದು ಪರಿಪ್ರೇಕ್ಷ್ಯದಲ್ಲಿ ಹಿಡಿದಿಟ್ಟು ಅದನ್ನು ಕಾಲದ ಅನಂತತೆಯಲ್ಲಿ ಕರಗಿಸಿಬಿಡುತ್ತದೆ. ಇದರ ಒಂದು ಮುಖ್ಯವಾದ ಪರಿಣಾಮವೆಂದರೆ ಶರೀರ ಸಂಬಂಧಿಯಾದ ಎಲ್ಲ ಕಟ್ಟುಗಳು ಮತ್ತು ಪಾಡುಗಳು ಕೂಡ ಬಯಲಿನ ಅನಂತತೆಯ ಪರಿಧಿಯಲ್ಲಿ ನಿರ್ವಚನಕ್ಕೆ ಒಳಗಾಗುವುದು.

ಕಾಲದ ಶ್ರೇಣಿಕರಣದೊಂದಿಗೆ ಕೆಲಸದ ಶ್ರೇಣಿಕರಣವೂ ತಳುಕು ಹಾಕಿಕೊಂಡದ್ದು ನಮ್ಮ ಸಾಮಾಜಿಕತೆಯ ಲಕ್ಷಣಗಳಲ್ಲೊಂದು. ಕುಲದ ನಿರಾಕರಣೆಯ ಮುಂದುವರಿಕೆಯಾಗಿ ಶ್ರೇಣಿಕರಣದ ನಿರಾಕರಣೆಯೂ. ಆ ಮೂಲಕವೇ ಕೆಲಸಗಳ ನಡುವಿನ ತಾರತಮ್ಯವೂ ದಾಸರಲ್ಲಿ ನಿರಾಕರಣೆಗೆ ಒಳಗಾಗುತ್ತದೆ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' ಎಂಬ ಹಾಡಿನ ತರ್ಕ ನಾಟಕೀಯವಾಗಿ ಇದನ್ನು ಸಾಧಿಸುವುದನ್ನು ಗಮನಿಸಬೇಕು.

ವೇದಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ

ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

ಚಂಡಭಟರಾಗಿ ನಡೆದು ಕತ್ತಿ ಡಾಲು ಕೈಲಿ ಹಿಡಿದು

ಖಂಡ ತುಂಡ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

.............................................................

ಹಳ್ಳದಲ್ಲಿ ಕುಳಿತುಕೊಂಡು ಕಲ್ಲು ದೊಣ್ಣೆ ಹಿಡಿದುಕೊಂಡು

ಕಳ್ಳತನವ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ




ಹೀಗೆ ಈ ಹಾಡು ಹಲವು ಬಗೆಯ ಮಾಡುವಿಕೆಗಳನ್ನು ಪಟ್ಟಿ ಮಾಡುತ್ತದೆ. ಎಲ್ಲ ಮಾಡುವಿಕೆಗಳನ್ನೂ ಸಮಾನ ಉದ್ದೇಶವೊಂದರಲ್ಲಿ ಏಕಗೊಳಿಸುತ್ತದೆ. ಕೆಲವು ಮಾಡುವಿಕೆಗಳು ಆಧ್ಯಾತ್ಮಿಕವೆಂದೂ, ಇನ್ನು ಕೆಲವು ಕ್ಷಾತ್ರ ವಾಣಿಜ್ಯ ಸಾಂಸ್ಕೃತಿಕ ಮೊದಲಾದ 'ಪ್ರತಿಷ್ಠಿತ' ವಲಯಗಳಿಗೆ ಸೇರಿದುವೆಂದೂ ಹಾಗಾಗಿಯೇ ಇವು ಹೊಟ್ಟೆಪಾಡಿನ 'ಕ್ಷುಲ್ಲಕತೆ'ಯಿಂದ ಭಿನ್ನವಾದವುಗಳೆಂದೂ ಹಣೆಪಟ್ಟಿಯನ್ನು ಹಚ್ಚಲಾಗಿತ್ತು. ಆದರೆ ಈ ಹಾಡು ಈ ಎಲ್ಲ ಹಣೆಪಟ್ಟಿಗಳನ್ನು ಕಳಚುತ್ತದೆ. 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ಪುನರಾವರ್ತನೆ ತಾರ್ಕಿಕ ಸಾಧನೆಯ ಉಪಕರಣವಾಗಿ ಉದ್ದಕ್ಕೂ ಬಳಕೆಯಾಗುವುದನ್ನು ಗಮನಿಸಬೇಕು. ಎಲ್ಲ ಮಾಡುವಿಕೆಗಳ ಸಮೀಕರಣದ ಮೂಲಕವೇ ಸಾಮಾಜಿಕ 'ಆಲಯ'ವು ನಿರ್ಮಿಸಿ ಕೊಂಡಿರುವ ಏರಿಳಿತಗಳನ್ನು ಸಮಗೊಳಿಸುವ ಕೆಲಸವನ್ನು ಈ ಹಾಡು ಯಶಸ್ವಿಯಾಗಿ ಮಾಡುತ್ತದೆ. ॐ



# ಬದುಕು ಎಂದರೇನು?

## (ಒಬ್ಬೊಬ್ಬರದು ಒಂದೊಂದು ರೀತಿ)






ಬುದ್ಧ ಹೇಳುತ್ತಾನೆ – "ಪ್ರೀತಿ ಮತ್ತು ಶಾಂತಿ"

ದುರ್ಯೋಧನ ಹೇಳುತ್ತಾನೆ – "ಹಠ ಮತ್ತು ಛಲ"

ಏಕಲವ್ಯ ಹೇಳುತ್ತಾನೆ – "ಗುರಿ"

ಯುಧಿಷ್ಠಿರ ಹೇಳುತ್ತಾನೆ – "ಧರ್ಮ"

ಭೀಷ್ಮ ಹೇಳುತ್ತಾನೆ – "ಪ್ರತಿಜ್ಞೆ"

ಒಬ್ಬ ಸಂತ ಹೇಳುತ್ತಾನೆ – "ಭಕ್ತಿ"

ಒಬ್ಬ ಸನ್ಯಾಸಿ ಹೇಳುತ್ತಾನೆ – "ವೈರಾಗ್ಯ"

ಅಲೆಕ್ಸಾಂಡರ್ ಹೇಳುತ್ತಾನೆ – "ಯುದ್ಧ"

ಶ್ರೀಮಂತ ಹೇಳುತ್ತಾನೆ – "ಮೋಜು ಮತ್ತು ಮಸ್ತಿ"


ಮಧ್ಯಮ ವರ್ಗದವನು ಹೇಳುತ್ತಾನೆ – "ಉದ್ಯೋಗ"

ಹಸಿದವನು ಹೇಳುತ್ತಾನೆ – "ತನ್ನ ಪಾಲಿನ ಅರ್ಧ ರೊಟ್ಟಿ"

ಹೀಗೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಬದುಕು ಕಾಣುತ್ತದೆ. ಅವರವರ ಆಲೋಚನೆಯಂತೆ ಅವರವರು ಬದುಕನ್ನು ಸಮರ್ಥಿಸುತ್ತಾರೆ. ಬದುಕೆನ್ನುವುದು ಸುಂದರವಾದ ಅನುಭವ. ಪ್ರತಿದಿನ, ಪ್ರತಿ ಗಂಟೆ, ಪ್ರತಿ ನಿಮಿಷ ಎಲ್ಲವೂ ಅಮೂಲ್ಯ. ಈ ಯಾವುದೂ ಹಿಂತಿರುಗಿ ಬರುವುದಿಲ್ಲ. ಒಮ್ಮೆ ಕಳೆದರೆ ಮುಗಿಯಿತು. ಆದ್ದರಿಂದಲೇ ಪ್ರತಿ ಕ್ಷಣದ ಬದುಕು ನವ–ನವೀನ. ಹೀಗೆಯೇ ನಮ್ಮ ಬದುಕು ಅನಿಶ್ಚಿತ ಕೂಡಾ. ಮುಂದಿನ ಕ್ಷಣ ಏನೆಂಬುದು ಯಾರಿಗೂ ತಿಳಿಯದು. ಈ ಕ್ಷಣವೇ ಪರಮ ಪವಿತ್ರ, ಈ ಕ್ಷಣವನ್ನು ಸಂಪೂರ್ಣ ಅನುಭವಿಸುವುದೇ ಬದುಕು. ಸಂಘರ್ಷ, ಮನಸ್ತಾಪ, ಕೋಪ, ದ್ವೇಷ ಇವುಗಳನ್ನು ಕಡಿಮೆ ಮಾಡುತ್ತಾ ಪ್ರೀತಿ, ಸೌಹಾರ್ದ, ಸಹಾಯ, ಕಾರುಣ್ಯ ಮತ್ತು ಹಸನ್ಮುಖದ ನಡುವೆ ಬದುಕುವುದೇ ಸಾರ್ಥಕ ಜೀವನ. ನಮ್ಮ ಚಿಂತನೆ ಸಕಾರಾತ್ಮಕವಾಗಿದ್ದರೆ ಆ ಕ್ಷಣದಲ್ಲಿ ಒಂದಷ್ಟು ಚೈತನ್ಯ ಮೂಡುತ್ತದೆ, ಇಲ್ಲವಾದರೆ ನಿರಾಸೆ ನಮ್ಮದಾಗುತ್ತದೆ. ಕಷ್ಟ, ನೋವು, ನಿರಾಸೆ, ದುಃಖ ಎಲ್ಲವೂ ಎಲ್ಲರಿಗೂ ಇದೆ, ಆದರೆ ಅವುಗಳ ಮಧ್ಯೆ ಸಂತೋಷದಿಂದ, ತೃಪ್ತಿಯಿಂದ ಬದುಕುವುದೇ ಜೀವನ. ॐ



# ಭಗವದ್ಗೀತೆ



ಭಗವದ್ಗೀತೆ ಓದಬೇಕು ಅಂತ ಬಹುತೇಕ ಹಿಂದೂಗಳಿಗೆ ಆಸೆ ಇರುತ್ತದೆ. ಭಗವದ್ಗೀತೆಯಲ್ಲಿ ಅಂಥದ್ದೇನಿದೆ ತಿಳ್ಕೋಬೇಕೆಂಬ ಕುತೂಹಲ. ಆದರೆ, 700 ಶ್ಲೋಕಗಳಿರುವ ಪುಸ್ತಕದ ಗಾತ್ರ ನೋಡಿ ಕೆಲವರು ಓದಲು ಹಿಂಜರಿದರೆ, ಮತ್ತೆ ಕೆಲವರು ಆ ಶ್ಲೋಕ ಗೀಕ ಎಲ್ಲ ಯಾರು ಓದ್ತಾರೆ ಅಂತ ಸುಮ್ನಾಗಿರ್ತಾರೆ. ನಿಮ್ಮಂಥವರಿಗಾಗಿಯೇ ಸರಳವಾಗಿ ಒಂದೊಂದು ಅಧ್ಯಾಯಗಳ ಸಾರವನ್ನೂ ಒಂದೆರಡು ಸಾಲಿನಲ್ಲಿ ಇಲ್ಲಿ ಕೊಡಲಾಗಿದೆ.

**ಅಧ್ಯಾಯ 11:**


## ವಿಶ್ವರೂಪ ದರ್ಶನ

ಈಶ್ವರತ್ವದ ರೂಪವನ್ನು ನೋಡುವ ಆಸೆಯನ್ನು ಅರ್ಜುನ ವ್ಯಕ್ತಪಡಿಸುತ್ತಾನೆ. ಇದರಿಂದ ಕೃಷ್ಣನು ತನ್ನ ಆದಿಅಂತ್ಯವಿಲ್ಲದ ಪ್ರಕಾಶಮಾನವಾದ ವಿಶ್ವರೂಪ ದರ್ಶನ ಮಾಡಿಸುತ್ತಾನೆ. ಇದನ್ನು ನೋಡಿ ಅರ್ಜುನ ಬೆರಗಾಗಿ ಶರಣಾಗುತ್ತಾನೆ. ಸತ್ಯವನ್ನು ಅರಿಯದಿದ್ದುದಕ್ಕೆ ಕ್ಷಮೆ ಯಾಚಿಸುತ್ತಾನೆ. ಓಂ

ಮುಂದುವರೆಯುವುದು...

# ಹೊಸ್ತಿಲನ್ನು ಪೂಜಿಸುವುದೇಕೆ ?

ಮನೆಯಲ್ಲಿ ದಿವ್ಯ ಸನ್ನಿದಿ ಅಥವಾ ದೈವಿಕತೆ ಇದ್ದಲ್ಲಿ ನಲಿವು, ಗೆಲುವು ಆನಂದ, ಶಾಂತಿ ನೆಮ್ಮದಿ ನೆಲೆಸುತ್ತದೆ ಎಂಬುದು ಅನುಭವದಿಂದ ಕಂಡುಕೊಂಡ ನಮ್ಮ ಪೂರ್ವಿಕರು ಅಂತಹ ಪರಿಸರ ನಿರ್ಮಿತಿಗಾಗಿಯೇ ಪ್ರಯತ್ನಿಸಿದರು. ಗಂಡಸರು ದೇವರಪೂಜೆ ಮಾಡಿ ದೇವರೊಡನೆ ಮೊರೆಯಿಟ್ಟರು. ಆ ಮೊರೆಗೆ ಒಲಿದು ದೇವರು ಮನೆಯ ಒಳಗೆ ಬಂದೇ ಬರುತ್ತಾನೆ ಎಂದೆಣಿಸಿದ ಅವರು, ಆತ ಬರುವಾಗ ಎದುರು ಬಾಗಿಲಿನ ಹೊಸ್ತಿಲನ್ನು ದಾಟಿ ಬರುವುದರಿಂದ ಆತನನ್ನು ಅಲ್ಲಿಯೇ ಆರತಿ ಬೆಳಗಿ ಸ್ವಾಗತಿಸುವ ಹೊಣೆಯನ್ನು ಸುಮಂಗಲಿಯರ ಪಾಲಿಗಿತ್ತರು. ಆತ ಅದೃಶ್ಯನಾಗಿರುವುದರಿಂದ ಆತನ ಪ್ರತೀಕವಾಗಿ ಆತ ದಾಟಿ ಬರುವ ಹೊಸ್ತಿಲನ್ನೇ ಪವಿತ್ರ ಎಂದೂ ತಿಳಿದು ಆತನ ನೆನಕೆಯಲ್ಲಿ ಅದನ್ನೇ ಪೂಜಿಸುವ ಕ್ರಮವನ್ನು ಸುಮಂಗಲಿಯರು ರೂಡಿಸಿಕೊಂಡರು. ಸುಮಂಗಲಿಯರಿಂದ ಪೂಜೆಗೊಳ್ಳುವುದರಿಂದಲೇ ಹೊಸ್ತಿಲಿನಲ್ಲಿ ಲಕ್ಷ್ಮಿ ಸನ್ನಿಧಾನ ಇದೆ ಎಂದೂ ಎಣಿಸಲಾಗುತ್ತದೆ... ಓಂ



# ಯಾತನೆಗಳ ನಡುವೆ ಒಂದು
# ಸಮಾಧಾನದ ಕಥೆ



✍ **ಕುಮಾರಸ್ವಾಮಿ ವಿ ಕೆ**

ನನ್ ಕಥೆ ಯಾಕ್ ಕೇಳ್ತಿಯಾ ಮಗ, ನಾನೊಬ್ಬ ನತದೃಷ್ಟೆ, ನನ್ಮಗ ಇಂಜಿನಿಯರ್, ಸೊಸೆ ಡಾಕ್ಟರ್, ಕೋಟಿ ಕೋಟಿಗೆ ಬದುಕವ್ರೆ. ಆದ್ರೆ ನನ್ ಮಾತ್ರ ತಂದು ಇಲ್ಲಿಗೆ ಹಾಕವ್ರೆ!! ಹೀಗೆ ಮಾತಿಗಿಳಿದ ಆ ಅಜ್ಜಿಯ ಕಥೆ ಕೇಳಿದಾಗ ನಿಜಕ್ಕೂ ಕರುಳು ಕಿತ್ತು ಬರುವಂತಾಯಿತು. ಗೆಳೆಯರೊಂದಿಗೆ ವೃದ್ಧಾಶ್ರಮವೊಂದಕ್ಕೆ ಭೇಟಿ ನೀಡಿದಾಗ ಕಂಡ ಕರುಣಾಜನಕ ಕಥೆಯಿದು. ಹೌದು ಬಂಧುಗಳೆ, ಇಂದಿನ ಸಮಾಜದಲ್ಲಿ ಇಂತಹ ದೃಶ್ಯಗಳು ಇಂದು ಸರ್ವೇ ಸಾಮಾನ್ಯವಾಗುತ್ತಿವೆ. ಒಂದೆಡೆ ಎಲ್ಲ ಇದ್ದು ಏನೂ ಇಲ್ಲದಂತಿರುವ ಹೃದಯಗಳ ಯಾತನೆ, ಮತ್ತೊಂದೆಡೆ ಇಂತಹ ಜೀವಗಳಿಗೂ ಆಶ್ರಯ ಇದೆ ಎಂಬ ಸಮಾಧಾನ, ಹೀಗೆ ಅನಾವರಣಗೊಂಡಿತ್ತು ಅಲ್ಲಿನ ಬದುಕು.

ಅಲ್ಲಿನ ಒಬ್ಬೊಬ್ಬರದ್ದೂ ಬಗೆಬಗೆಯ ಕರುಳು ಹಿಂಡುವ ಕಥೆ. ಕೆಲವು ಮಕ್ಕಳಿಗೆ ಸಂಬಂಧಿಸಿದ್ದಾದರೆ, ಮತ್ತೆ ಕೆಲವೊಂದು ಸೊಸೆಯಂದಿರಿಗೆ ಹೆಣೆದುಕೊಳ್ಳುತ್ತದೆ. ಬೇಗುದಿಗಳ ಆ ಬದುಕು ನೋಡಿದಾಗ ನಿಜಕ್ಕೂ ಸಂಸಾರ ಬಂಧನ ಏನೆಂಬುದರ ಅರಿವು ಒಡಮೂಡುತ್ತದೆ. ಆದರೆ ಚಂದ್ರಯಾನ ಮಾಡುವಂತಹ ಬೌದ್ಧಿಕ ಸಾಮರ್ಥ್ಯ ಹೊಂದಿರುವ ಇಂದಿನ 4ಜಿ, 5ಜಿ ಯುಗದಲ್ಲೂ ಹೆತ್ತವರನ್ನು ನೋಡಿಕೊಳ್ಳಲಾಗದ 2ಜಿ ಮಂದಿಯೂ ನಮ್ಮಗಳ ನಡುವೆ ಇದ್ದಾರೆಂಬ ಸತ್ಯ ಅತ್ಯಂತ ಕಟುವಾಗಿಯೇ ಇದೆ.

ಆ ಹಿರಿ ಜೀವಗಳು ನಮಗಾಗಿ ಮಾಡುವ ತ್ಯಾಗಗಳು ಅಸಂಖ್ಯಾತ. ತಮ್ಮ ಹೊಟ್ಟೆಗೆ ಇಲ್ಲದಿದ್ದರೂ, ಮಕ್ಕಳಿಗೆ ಹಸಿವಿನ ಬೆಲೆ ತಿಳಿಯಬಾರದೆಂದು ಪರಿತಪಿಸುವ ಅಂತಹ ನಿಷ್ಕಪಟ ಮನಸ್ಸುಗಳಿಗೆ ಕೊನೆಗಾಲದಲ್ಲಿ ಒಂದು ತುತ್ತು ಅನ್ನವಿಡದಷ್ಟು ಅಂಧಕಾರ ತುಂಬಿಕೊಂಡಿರುವ ಮಂದಿಗೆ ಧಿಕ್ಕಾರವಿರಲಿ. ಇದನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿದಾಗ ತಿಳಿದು ಬರುವ ಸತ್ಯವೆಂದರೆ ಇಷ್ಟೆಲ್ಲಾ ಅವಾಂತರಗಳಿಗೆ ಕಾರಣರಾಗುತ್ತಿರುವುದು ಬಹುತೇಕ ನಮ್ಮ ವಿದ್ಯಾವಂತ ಸಮುದಾಯ ಎನ್ನುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಮಕ್ಕಳನ್ನು ಓದಿಸಲು ಮತ್ತು ಅವರಿಗೊಂದು ಶಾಶ್ವತ ನೆಲೆ ಕಲ್ಪಿಸಲು ತಮ್ಮ ಜೀವನವನ್ನೇ ತ್ಯಾಗ ಮಾಡುವ ಪೋಷಕರ ಮುಂದೆ ತಿಂಗಳಿಗೆ ಲಕ್ಷ ಲಕ್ಷ ಪಗಾರ ಎಣಿಸುವ ಮಕ್ಕಳ ಸಾಧನೆ ತೃಣಕ್ಕೆ ಸಮಾನ.

ಕೂಸು ಜನಿಸಿದ ಆ ಗಳಿಗೆ ನಿಜಕ್ಕೂ ಅಮೃತ ಗಳಿಗೆಯೇ. ಆ ಸಂಭ್ರಮಕ್ಕೆ ಎಣೆಯೇ ಇಲ್ಲ. ಮನೆ ಮಂದಿಗೆ, ಸ್ನೇಹಿತರಿಗೆ, ಬಂಧುಗಳಿಗೆ ವಿಷಯ ತಿಳಿಸಿ ಖುಷಿ ಪಡುವ ಆ ಜೀವಗಳ ಆನಂದಕ್ಕೆ ಹೃದಯ ತುಂಬಿದ ಸಲಾಂ. ಆದರೆ ಅದೇ ಮಗ ಇಂದು ಹಾಲುಣಿಸಿ, ಅನ್ನವಿಟ್ಟ ಪೋಷಕರನ್ನು ಕಡೆಗಣಿಸಿ ಅದೆಲ್ಲೋ ದೂರದಲ್ಲಿರುವ ವೃದ್ಧಾಶ್ರಮಕ್ಕೆ ಬಿಟ್ಟು ಬರುವ ವಿಷ ಗಳಿಗೆ ಬರುವುದೆಂದು ಆ ಜೀವಗಳೆಂದೂ ಕಲ್ಪಿಸಿಕೊಂಡೂ ಇರುವುದಿಲ್ಲ. ಇಂತಹ ಹೃದಯ ಬಿರಿಯುವ ಘಟನೆಗಳು ಮಾನವೀಯ ಸಂಬಂಧಗಳ ಉದ್ದ, ಆಳವನ್ನು ಒಮ್ಮೆ ಅಳತೆ ಮಾಡಿ ತೋರಿದಂತಾಗುತ್ತದೆ. ಆ ಮಗು ಮೊದಲ ಬಾರಿಗೆ ನಡೆದಾಗ, ಮೊದಲ ಬಾರಿ ಅಮ್ಮಾ ಎಂದು ಉದ್ಗರಿಸಿದಾಗ, ಮೊದಲ ದಿನ ಅಪ್ಪ ಎಂದಾಗ, ಎದೆಯ ಮೇಲೆ ಕುಳಿತು ಆಡುವಾಗ, ಮೊದಲ ಬಾರಿ ಬಿದ್ದು ಗಾಯವಾಗಿ ರಕ್ತ ಸುರಿದಾಗ, ಶಾಲೆಗೆ ಹೊರಟಾಗ ಹೀಗೆ ಪ್ರತಿ ಕ್ಷಣ ಕ್ಷಣವನ್ನು ಆಸ್ವಾದಿಸಿ, ಆನಂದಿಸುವ ಆ ಮಾತೃ ಹೃದಯದ ಸ್ಮರಣ ಶಕ್ತಿ ಸಹಸ್ರ ಎಂಬಿ, ಜಿಬಿ, ಟಿಬಿ ಮೆಮೊರಿಗಿಂತ ಅತ್ಯದ್ಭುತ. ಇಂತಹ ನೆನಪುಗಳನ್ನೇ ಬದಿಗಿರಿಸಿ ಭಾರವಾದ ಹೃದಯದೊಂದಿಗೆ ಆಶ್ರಮ ಸೇರಿ ನಲುಗಿಸುವ ಆ ಕ್ಷಣ ಮನುಕುಲದ ಮತ್ತೊಂದು ಮುಖ ದರ್ಶನವೇ ಸರಿ.



ರಸ್ತೆಗೆ ಡಾಂಬರು ಹಾಕುವಾಗ, ಕಟ್ಟಡ ನಿರ್ಮಾಣದ ವೇಳೆ, ಹೊಲ ಗದ್ದೆಗಳಲ್ಲಿ ಕೆಲಸ ಮಾಡುವ ಸಮಯದಲ್ಲಿ, ಅನೇಕ ಜನ ತಾಯಂದಿರು ತಮ್ಮ ಪುಟ್ಟ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಗಂಡಸಿನೋಪಾದಿ ದುಡಿಯುತ್ತಾ ತಮ್ಮ ಮಕ್ಕಳನ್ನು ಸಲಹುವ ರೀತಿ ನಿಜಕ್ಕೂ ಮನಕಲಕುವಂತಹುದು. ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿ, ತಾವು ಉಪವಾಸವಿದ್ದರೂ ತಮ್ಮ ಮಕ್ಕಳಿಗೆ ಉಪವಾಸವಿರಿಸದೆ, ತಾವು ಹಳೆ ಬಟ್ಟೆ ಧರಿಸಿ ಮಕ್ಕಳನ್ನು ಹೊಸ ಬಟ್ಟೆಯಲ್ಲಿ ನೋಡಲು ಸಂತಸ ಪಡುವ ಜೀವಗಳ ಋಣ ತೀರಿಸಲು ಸಾಧ್ಯವೇ ಇಲ್ಲ. ಆ ಜೀವಗಳು ಬಯಸುವುದು ಆರೈಕೆ, ಹೊತ್ತಿಗೆ ತುತ್ತು, ತುಂಬು ಹೃದಯದ ನಗು. ಆದರೆ ಇವುಗಳನ್ನು ಕೊಡಲಾಗದ ಮಕ್ಕಳು ಏನು ಸಾಧಿಸದರೇನು ಫಲ? ಫಲ ಕೊಟ್ಟ ವೃಕ್ಷ ಒಣಗದಂತೆ ಕಾಪಾಡದಿದ್ದರೆ ಆ ಫಲವನ್ನುಂಡ ಫಲ ನಿಜಕ್ಕೂ ದಕ್ಕದು.

ಈ ವಿಶ್ವದಲ್ಲಿ ದೇವರು ಎಲ್ಲೆಡೆ ಇರಲು ಸಾಧ್ಯವಾಗದೆ, ಆ ಸ್ಥಾನಕ್ಕೆ ತಂದೆ–ತಾಯಿಯರನ್ನು ಕಳುಹಿಸಿದ್ದಾರೆ ಎಂಬುದೊಂದು ಮಾತಿದೆ. ಇಂತಹ ಉತ್ಕೃಷ್ಟ, ಗೌರವಾನ್ವಿತ, ಪೂಜನೀಯ ವ್ಯಕ್ತಿತ್ವವುಳ್ಳ ಯಾವ ಪೋಷಕರೂ ಸಹ ಎಂತಹುದೇ ಸಂದರ್ಭಗಳಲ್ಲಿ ತಮ್ಮ ಮಕ್ಕಳಿಗೆ ಕೆಡುಕನ್ನು ಬಯಸುವುದಿಲ್ಲ. ಅವರ ಕೊನೆಯ ಗಳಿಗೆಯವರೆಗೂ ತಮ್ಮ ಮಕ್ಕಳ ಪ್ರಗತಿಯನ್ನು ಕಂಡು ಹರ್ಷಿಸುತ್ತಾ, ಹರಸುತ್ತಿರುತ್ತಾರೆಯಷ್ಟೆ. ಇಂತಹ ಹೃದಯವಂತರ ನಡುವೆ ಇರುವ ಕೆಲವು ಹೃದಯ ಹೀನ ಮಕ್ಕಳು ಈ ಸಮಾಜಕ್ಕೆ ಒಂದು ಕಪ್ಪು ಚುಕ್ಕೆಯಂತೆ. ಪ್ರತಿಯೊಬ್ಬರ ಜೀವನಕ್ಕೂ ಸ್ವಂತಿಕೆ ಮುಖ್ಯ ನಿಜ, ಆದರೆ ಹೆತ್ತವರನ್ನು ದೂರ ಮಾಡುವಂತಹ ಬಲವಂತಿಕೆಯಲ್ಲ. ಇಂತಹ ಸಂದರ್ಭಗಳನ್ನು ನೆನೆದಾಗ ಪ್ರಾಣಿಗಳೆ ಗುಣದಲಿ ಮೇಲು, ಮಾನವನದಕ್ಕಿಂತ ಕೀಳು ಎಂಬ ಸಾಲು ನೆನಪಾಗುತ್ತದೆ!!

ಆಧುನಿಕತೆಯ ಭರಾಟೆಯಲ್ಲಿ ಕೆಲವೊಮ್ಮೆ ಪೋಷಕರಿಂದ ಗಲಿಬಿಲಿಯಾಗುವ ಸಂದರ್ಭಗಳು ಎದುರಾಗಬಹುದು ನಿಜ. ಆದರೆ ಅವರಿಗಾಗಿ ಮಕ್ಕಳು ಸೋಲುವ ಅಥವಾ ಪರ್ಯಾಯ ಮಾರ್ಗ ಅನುಸರಿಸಬೇಕೇ ಹೊರತು ಹೆತ್ತವರಿಗೆ ನೋವಾಗುವಂತಹ ಮಾರ್ಗ ತುಳಿಯಬಾರದು. ಇಂದಿನ ಸಮಾಜ ಅನೇಕ ಒತ್ತಡ ಹಾಗೂ ಜಿಜ್ಞಾಸೆಗಳಿಂದ ಕೂಡಿದೆ. ಇದನ್ನು ದಾಟಲು ಒಮ್ಮೊಮ್ಮೆ ತೀವ್ರ ಸಮಾಧಾನ ಹಾಗೂ ತಾಳ್ಮೆ ಅತಿ ಮುಖ್ಯ. ಚಿಕ್ಕಂದಿನಲ್ಲಿ ಒಂದು ಗಳಿಗೆಯೂ ಪೋಷಕರ ಅಗಲಿಕೆಯನ್ನು ಸಹಿಸದ ಮಗು, ಬೆಳೆದು ನಿಂತ ಮೇಲೆ ಅವರನ್ನೇ ದೂರ ಮಾಡಲು ತೆಗೆದುಕೊಳ್ಳುವ ನಿರ್ಧಾರಗಳು ಆ ಹಿರಿ ಜೀವಗಳಿಗೆ ತರುವ ನೋವು ಅಷ್ಟಿಷ್ಟಲ್ಲ. ಹಣ, ಗೌರವ, ಅಧಿಕಾರ ಹೀಗೆ ಎಲ್ಲವನ್ನೂ ಸಂಪಾದಿಸಬಹುದು ನಿಜ, ಆದರೆ ನಾವು ಹೆತ್ತವರಿಗೆ ಕೊಡುವ ನೋವಿಗೆ ಪರಿಹಾರ ಎಂದಿಗೂ ಸಿಗದು. ಅವರೆಂದೂ ಶಪಿಸುವುದಿಲ್ಲ, ಆದರೆ ನೊಂದುಕೊಳ್ಳುವ ಆ ಹೃದಯದ ಬೇನೆ ತಿರುಗಿ ಬಂದು ಕೊಟ್ಟವರಿಗೇ ತಟ್ಟುತ್ತದೆ!!

ಮಕ್ಕಳ ಪಾಲಿಗೆ ಅವರು ಎಂದಿಗೂ ಭವಿಷ್ಯ ಹೇಳುವವರಾಗುವುದಿಲ್ಲ, ಬದಲಿಗೆ ಭವಿಷ್ಯ ನಿರ್ಮಾತೃಗಳಾಗುತ್ತಾರೆ. ತಮ್ಮ ಜೀವನವನ್ನೇ ಮಕ್ಕಳ ಶ್ರೇಯೋಭಿವೃದ್ಧಿಗೆ ಮುಡಿಪಾಗಿರಿಸುವ ಆ ನಿಷ್ಕಪಟ ಮನೋಭಾವದ ವ್ಯಕ್ತಿತ್ವಗಳು ಈ ಜಗದಲ್ಲೆಲ್ಲೂ ಕಾಣಸಿಗದು. ಬದುಕಿನ ಅರೆ ಗಳಿಗೆಯೂ ಸ್ವಾರ್ಥರಾಗದೆ ಉಳಿಯುವ ಅಂತಹ ಸಹೃದಯ ಜೀವಗಳ ಪಾಲನೆ ಕರ್ತವ್ಯಕ್ಕಿಂತ ಹೆಚ್ಚಾಗಿ ಪುಣ್ಯವೇ ಸರಿ. ಆದರೆ ಬದಲಾದ ನಮ್ಮ ಸಮಾಜ ಈ ವಿಚಾರದಲ್ಲಿ ಎಡವುತ್ತಿರುವುದು ಬೇಸರ ಹಾಗೂ ಗಾಬರಿ ತರಿಸುವ ಸಂಗತಿ. ಎಲ್ಲ ಮಕ್ಕಳೂ ಹಾಗಿಲ್ಲ ನಿಜ, ಆದರೆ ಕೆಲವು ಬದಲಾದ ಮನಸ್ಥಿತಿಗಳಿಂದ ಇಂತಹ ಅನಪೇಕ್ಷಿತ ನಡವಳಿಕೆಗಳು ತಲೆದೋರುತ್ತವೆ.

ಭವಿಷ್ಯ ಕಟ್ಟಿದವರ ಬದುಕಿಗೆ ನೋವು ಕೊಡುವುದು ತರವಲ್ಲ. ನಲಿವು ತಂದ ಹೃದಯಕ್ಕೆ ಸಂಕಟ ತರುವುದು ಸರಿಯಲ್ಲ. ಲಾಲನೆ ಪಾಲನೆಗೈದ ಆ ಜೀವಗಳಿಗೆ ತೃಪ್ತಿ ತರುವ ಕೆಲಸಗಳಾದಾಗ ಮಾತ್ರ ಮಾನವೀಯ ಮೌಲ್ಯಗಳು ಉಳಿಯುವುದು, ಬಾಳು ಬೆಳಗುವುದು. ॐ


## ಮನೆ ಮದ್ದು



### ಸೀತಾಫಲ ಹಣ್ಣು ಮತ್ತು ಅದರ ಬೀಜದ ಉಪಯೋಗ

ಸೀತಾಫಲ ಹಣ್ಣಿನಲ್ಲಿ ಮಾತ್ರ ಅಲ್ಲ, ಅದರ ಬೀಜದಲ್ಲಿ ಈ ಹಣ್ಣಿನ ತೊಗಟೆಯ ಎಲೆಗಳಲ್ಲಿ ಆರೋಗ್ಯಕ್ಕೆ ಲಾಭಗಳು ಇವೆ. ಸೀತಾಫಲ ಹಣ್ಣಿನ ಎಲೆಯನ್ನು ಅಥವಾ ತೊಗಟೆಯನ್ನು ಒಣಗಿಸಿ ಅದನ್ನು ಪುಡಿಮಾಡಿ ನೀರಿನಲ್ಲಿ ಬೆರೆಸಿ ತಲೆಗೆ ಹಚ್ಚುವುದರಿಂದ ಹೊಟ್ಟಿನ ಸಮಸ್ಯೆ ಮತ್ತು ಹೇನುಗಳು ಸಮಸ್ಯೆ ದೂರವಾಗುತ್ತದೆ.

# ಪಂಡಿತ್ ಜವಹರಲಾಲ್ ನೆಹರು



ಪಂಡಿತ್ ಜವಾಹರಲಾಲ್ ನೆಹರು 14 ನವೆಂಬರ್ 1889 ರಂದು ಜನಿಸಿದರು. ಇವರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರು, ಭಾರತದ ಮೊದಲ ಪ್ರಧಾನಿ ಮತ್ತು ಭಾರತದ ಸ್ವಾತಂತ್ರ್ಯ ಮೊದಲು ಮತ್ತು ನಂತರ ರಾಜಕೀಯದಲ್ಲಿ ಕೇಂದ್ರ ವ್ಯಕ್ತಿ. ಅವರು ಮಹಾತ್ಮ ಗಾಂಧಿಯವರ ಮಾರ್ಗದರ್ಶನದಡಿಯಲ್ಲಿ ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಒಬ್ಬ ಶ್ರೇಷ್ಠ ನಾಯಕನಾಗಿ ಹೊರಹೊಮ್ಮಿದರು. 1947ರಲ್ಲಿ ಭಾರತ ಸ್ವತಂತ್ರ ರಾಷ್ಟ್ರವಾಗಿ ಸ್ಥಾಪನೆಯಾದಂದಿನಿಂದ 1964 ರಲ್ಲಿ ಅವರ ಮರಣದವರೆಗೂ ಭಾರತದ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ಸಮಾಜವಾದಿ ತತ್ವದ, ಪ್ರಜಾಪ್ರಭುತ್ವ ಗಣರಾಜ್ಯದ ಮತ್ತು ಜಾತ್ಯತೀತತತ್ವದ ಸಾರ್ವಭೌಮ, ಸ್ವತಂತ್ರ ಆಧುನಿಕ ಭಾರತದ ಶಿಲ್ಪಿ ಎಂದು ಅವರು ಪರಿಗಣಿಸಲ್ಪಟ್ಟಿದ್ದಾರೆ. ಕಾಶ್ಮೀರಿ ಪಂಡಿತ್ ಸಮುದಾಯದೊಂದಿಗಿನ ಅವರ ಮೂಲ ವಂಶದಿಂದಾಗಿ ಅವರು ಪಂಡಿತ್ ನೆಹರೂ ಎಂದು ಕರೆಯಲ್ಪಡುತ್ತಾರೆ, ಭಾರತೀಯ ಮಕ್ಕಳಲ್ಲಿ ಅವರು ಚಾಚಾ ನೆಹರು ("ಅಂಕಲ್ ನೆಹರು") ಎಂದು ಪ್ರಸಿದ್ಧರಾಗಿದ್ದರು.

**ನೆಹರುರವರ ಸಾರ್ವಜನಿಕ ಜೀವನ :**

ನೆಹರು ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜ್ ಪದವೀಧರರಾಗಿದ್ದರು. ಇಂಗ್ಲೆಂಡ್‌ನಲ್ಲಿದ್ದಾಗ ನೆಹರು ಅವರು ಫೇಬಿಯನ್ ಸಾಮಾಜಿಕ ವಿಧಾನಗಳನ್ನು ಬಹುವಾಗಿ ಮೆಚ್ಚಿದ್ದರು. ಇಂಗ್ಲೆಂಡಿನಲ್ಲಿ ಅವರು ಇನ್ನರ್ ಟೆಂಪಲ್‌ನಲ್ಲಿ ತರಬೇತಿ ಪಡೆದು ನ್ಯಾಯಾವಾದಿಯಾಗಿ/ಬ್ಯಾರಿಸ್ಟರ್'ಆಗಿ ಭಾರತಕ್ಕೆ ಹಿಂದಿರುಗಿದ ನಂತರ, ಅವರು ಅಲಹಾಬಾದ್ ಹೈಕೋರ್ಟ್‌ನಲ್ಲಿ ಸೇರಿಕೊಂಡರು. ರಾಷ್ಟ್ರೀಯ ರಾಜಕಾರಣದಲ್ಲಿ ಆಸಕ್ತಿಯನ್ನು ತೋರಿದರು, ತಂದೆಯೊಂದಿಗೆ ರಾಜಕೀಯದಲ್ಲಿ ಸಕ್ರಿಯರಾದರು. ಅಂತಿಮವಾಗಿ ಅವರ ಕಾನೂನು ವಿವಾದ ವಕೀಲಿ ಉದ್ಯೋಗವು ಬದಲಾಗಿ ಅವರ ಕಾರ್ಯ ರಾಷ್ಟ್ರೀಯವಾದದ ಕಡೆ ತಿರುಗಿತು. ಇವರು 1916ರ ವಸಂತ ಪಂಚಮಿಯ ದಿನದಂದು ನೆಹರು ಅವರು ಕಮಲಾ ಕೌಲ್‌ರವರನ್ನು ಮದುವೆಯಾದರು.

ಅವರ ಹದಿಹರೆಯದ ವರ್ಷಗಳಿಂದ ಬದ್ಧ ರಾಷ್ಟ್ರೀಯತಾವಾದಿಯಾಗಿದ್ದು, 1910 ರ ಕ್ರಾಂತಿಗಳ ಸಮಯದಲ್ಲಿ ಅವರು ಭಾರತೀಯ ರಾಜಕೀಯದಲ್ಲಿ ಏರುತ್ತಿರುವ ಉನ್ನತ ವ್ಯಕ್ತಿಯಾಗಿದ್ದರು. ಅವರು 1920 ರ ದಶಕದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್'ನ ಎಡಪಂಥೀಯ ಬಣಗಳ ಪ್ರಮುಖ ನಾಯಕರಾದರು ಮತ್ತು ಅಂತಿಮವಾಗಿ ಕಾಂಗ್ರೆಸ್'ನ ಸಂಪೂರ್ಣ ಮಾರ್ಗದರ್ಶಿಯಾದ ಗಾಂಧಿಯವರ ಅನುಮತಿಯೊಂದಿಗೆ ಇಡೀ ಕಾಂಗ್ರೆಸ್'ನ ನಾಯಕರಾದರು. ಕಾಂಗ್ರೆಸ್ ಅಧ್ಯಕ್ಷರಾಗಿ 1929 ರಲ್ಲಿ, ನೆಹರೂ ಬ್ರಿಟಿಷ್ ಆಳ್ವಿಕೆಯಿಂದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಕರೆ ನೀಡಿದರು ಮತ್ತು ಕಾಂಗ್ರೆಸ್'ನ ನಿರ್ಣಾಯಕ ಬದಲಾವಣೆಯಿಂದ ಎಡಪಂಥಕ್ಕೆ ತಿರುಗಿಸಿದರು.

**ರಾಜಕೀಯ ಪ್ರವೇಶ :**

1918–1937 ರವರೆಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. 1919 ರಲ್ಲಿ ಮಗಳು ಇಂದಿರಾ ಪ್ರಿಯದರ್ಶಿನಿ ಜನಿಸಿದಳು. ರಾಜಕೀಯದಲ್ಲಿ, ಮಹಾತ್ಮ ಗಾಂಧಿಯವರ ಶಿಷ್ಯನಾದ ಇವರು, ಮೊದಲ ಬಾರಿಗೆ 1929 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಉನ್ನತಿಗೇರಿದರು. ಈ ದಿನಗಳನ್ನು ಇವರು ಬಹುವಾಗಿ ಕಾರಾಗೃಹವಾಸದಲ್ಲಿದ್ದು ಪುಸ್ತಕಗಳು, ಪತ್ರಗಳನ್ನು ಬರೆಯುತ್ತಾ ಕಳೆದರು.


1930 ರ ದಶಕದಲ್ಲಿ ಭಾರತೀಯ ರಾಜಕೀಯದಲ್ಲಿ ನೆಹರೂ ಮತ್ತು ಕಾಂಗ್ರೆಸ್ ಪ್ರಮುಖ ಪತ್ರವಾಗಿತ್ತು. ಕಾಂಗ್ರೆಸ್ ನಾಯಕತ್ವದಲ್ಲಿ, 1937 ರ ಪ್ರಾಂತೀಯ ಚುನಾವಣೆಯನ್ನು ಮುನ್ನಡೆಸಿ ಹಲವಾರು ಪ್ರಾಂತ್ಯಗಳಲ್ಲಿ ಸರ್ಕಾರವನ್ನು





ರಚಿಸಿದಾಗ ಅವರ "ಜಾತ್ಯತೀತ ರಾಷ್ಟ್ರ/ದೇಶದ" ಅವರ ಕಲ್ಪನೆಯನ್ನು ಜನರು ಬೆಂಬಲಿಸುವಂತೆ ಕಂಡುಬಂತು; ಮತ್ತೊಂದೆಡೆ, ಪ್ರತ್ಯೇಕತಾವಾದಿ ಮುಸ್ಲಿಂ ಲೀಗ್ ಹೆಚ್ಚು ಕ್ಷೀಣ ಬೆಂಬಲವನ್ನು ಗಳಿಸಿತು. ಆದರೆ 1942 ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯ ನಂತರ ಈ ಸಾಧನೆಗಳು ತೀವ್ರವಾಗಿ ಹಿನ್ನಡೆ ಕಂಡು ರಾಜಿಯಾಗಿದ್ದವು, ಅದು ಬ್ರಿಟಿಷರು ಕಾಂಗ್ರೆಸ್ ಅನ್ನು ಒಂದು ರಾಜಕೀಯ ಸಂಘಟನೆಯಾಗಿ ಪರಿಗಣಿಸಿ ಅದನ್ನು ಪರಿಣಾಮಕಾರಿಯಾಗಿ ಬಗ್ಗುಬಡಿಯಿತು. ನೆಹರು ಅವರಿಗೆ ಸ್ವಾತಂತ್ರ್ಯಕ್ಕಾಗಿ ತಕ್ಷಣದ ಕರೆಕೊಡುವ ಮನಸ್ಸಿರಲಿಲ್ಲ, ಆದರೆ ಗಾಂಧಿಯವರ ಕರೆಗೆ ಬೆಂಲಿಸಿದರು. ಏಕೆಂದರೆ ಅವರು ಎರಡನೇ ವಿಶ್ವ ಸಮರ ಸಮಯದಲ್ಲಿ ಮಿತ್ರಪಕ್ಷದ ಯುದ್ಧದ ಚಟುವಟಿಕೆಯನ್ನು ಬೆಂಬಲಿಸಲು ಬಯಸಿದ್ದರು, ಅವರು ಹೆಚ್ಚು ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ದೀರ್ಘವಾದ ಸೆರೆವಾಸದಿಂದ ಹೊರಬಂದರು. ಅವರ ಹಳೆಯ ಕಾಂಗ್ರೆಸ್ ಸಹೋದ್ಯೋಗಿ ಮತ್ತು ಈಗ ಎದುರಾಳಿ ಮೊಹಮ್ಮದ್ ಅಲಿ ಜಿನ್ನಾ ಅವರ ಮುಸ್ಲಿಂ ಲೀಗ್, ಆಗ ಭಾರತದಲ್ಲಿ ಮುಸ್ಲಿಂ ರಾಜಕೀಯವನ್ನು ಮುಸ್ಲಿಂ ರಾಜಕೀಯ ನೀತಿಯಿಂದ ಆಳಲು ಬಂದಿತು. ಅಧಿಕಾರ ಹಂಚಿಕೆಗಾಗಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವಣ ಮಾತುಕತೆಗಳು ವಿಫಲವಾದವು ಮತ್ತು 1947 ರಲ್ಲಿ ಭಾರತದ ಸ್ವಾತಂತ್ರ್ಯ ಗಳಿಕೆಯ ಜೊತೆ ಭಾರತದ ರಕ್ತಸಿಕ್ತ ವಿಭಜನೆಗೆ ಕಾರಣವಾಯಿತು.

ನೆಹರು ಅವರನ್ನು ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಿ ಕಾಂಗ್ರೆಸ್‌ನಿಂದ ಚುನಾಯಿತರಾದರು, ಆದರೆ ನಾಯಕತ್ವ ಪ್ರಶ್ನೆಯ ವಿಚಾರದಲ್ಲಿ ನೆಹರು ಅವರನ್ನು ರಾಜಕೀಯ ಉತ್ತರಾಧಿಕಾರಿಯಾಗಿ 1941 ರಲ್ಲಿಯೇ ಅವರ ಸ್ಥಾನಮಾನವನ್ನು ಬಗೆಹರಿಸಲಾಗಿತ್ತು. ಗಾಧಿಜಿಯವರು ತಮ್ಮ ನಂತರದ ರಾಜಕೀಯ ಉತ್ತರಾಧಿಕಾರಿಯು ನೆಹರು ಎಂದು 1941 ರಲ್ಲೇ ಒಪ್ಪಿ ಹೇಳಿಕೆ ಕೊಟ್ಟಿದ್ದರು.



ಭಾರತದ ಮೊಟ್ಟ ಮೊದಲ ಪ್ರಧಾನಿಯಾಗಿ ನೆಹರೂರವರು 1947–1964 ರವರೆಗೆ ಕಾರ್ಯ ನಿರ್ವಹಿಸಿದರು. ಇವರು ಭಾರತದ ಬಗ್ಗೆ ಅವರ ದೃಷ್ಟಿಕೋನದ ರಾಷ್ಟ್ರವನ್ನು ಸಾಧಿಸಲು


ಹೊರಟರು. 1950 ರಲ್ಲಿ ಭಾರತದ ಸಂವಿಧಾನವನ್ನು ಜಾರಿಗೊಳಿಸಲಾಯಿತು, ನಂತರ ಅವರು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳ ಮಹತ್ವಾಕಾಂಕ್ಷೆಯ ಯೋಜನೆಯನ್ನು ಪ್ರಾರಂಭಿಸಿದರು. ಮುಖ್ಯವಾಗಿ, ಅವರು ಭಾರತವು ಒಂದು ವಸಾಹತು–ದೇಶದಿಂದ ಗಣರಾಜ್ಯವಾಗುವವರೆಗಿನ ರೂಪಾಂತರಕ್ಕೆ ಸಾಕ್ಷಿಯೂ, ಕಾರಣೀಭೂತರೂ ಆದರು. ಬಹುಸಿದ್ಧಾಂತಗಳ ಬಹು ರಾಜಕೀಯ ಪಕ್ಷಗಳ (ಮಲ್ಟಿ–ಪಾರ್ಟಿ ಸಿಸ್ಟಮ್) ವ್ಯವಸ್ಥೆಯನ್ನು ಪೋಷಣೆ ಮಾಡಿದರು. ವಿದೇಶಿ ನೀತಿಯಲ್ಲಿ ಅವರು ದಕ್ಷಿಣ ಏಷ್ಯಾದಲ್ಲಿ ಪ್ರಾದೇಶಿಕ ಮುಖ್ಯ ಸಂಯೋಜಕರಾಗಿ(ಹೆಗ್'ಮನ್) ಆಗಿ ಭಾರತವನ್ನು ಯೋಜಿಸಿ ಅಲಿಪ್ತ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು.

ನೆಹರೂ ಅವರ ನಾಯಕತ್ವದಲ್ಲಿ, ಕಾಂಗ್ರೆಸ್ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ರಾಜಕೀಯವನ್ನು ನಿಯಂತ್ರಿಸುತ್ತಾ, 1951, 1957, ಮತ್ತು 1962 ರಲ್ಲಿ ಸತತ ಚುನಾವಣೆಯನ್ನು ಗೆದ್ದುಕೊಂಡು ಎಲ್ಲಾ ಪಕ್ಷಗಳನ್ನು ಮೀರಿಸಿದ (ಕ್ಯಾಚ್–ಆಲ್) ಪಕ್ಷವಾಗಿ ಹೊರಹೊಮ್ಮಿತು. ಅವರ ಕೊನೆಯ ವರ್ಷಗಳಲ್ಲಿ ರಾಜಕೀಯ ಸಮಸ್ಯೆಗಳ ನಡುವೆಯೂ ಮತ್ತು 1962 ರಲ್ಲಿ ಸಿನೋ–ಇಂಡಿಯನ್ ಯುದ್ಧದ ಸಮಯದಲ್ಲಿ ನಾಯಕತ್ವದ ವೈಫಲ್ಯದಲ್ಲೂ ಅವರು ಭಾರತದ ಜನತೆಗೆ ಜನಪ್ರಿಯರಾಗಿದ್ದರು. ಭಾರತದಲ್ಲಿ ಅವರ ಜನ್ಮದಿನವನ್ನು "ಬಾಲ ದಿವಸ್" (ಮಕ್ಕಳ ದಿನ) ಎಂದು ಆಚರಿಸಲಾಗುತ್ತದೆ.

ನೆಹರೂರವರು 18 ವರ್ಷಗಳ ಕಾಲ ಭಾರತದ ಪ್ರಧಾನಿಯಾಗಿದ್ದರು. ಇವರು 1964ರ ಮೇ 27 ರಂದು ನಿಧನರಾದರು. ಪಂಡಿತ ಜವಹರಲಾಲ್ ನೆಹರೂರವರು 1947 ಆಗಸ್ಟ್ 14 ರ ಮಧ್ಯರಾತ್ರಿ (12.25) ರಂದು ಸಂಸತ್ತನ್ನುದ್ದೇಶಿಸಿ ಮಾಡಿದ 'ಎ ಟ್ರಿಸ್ಟ್ ವಿಥ್ ಡೆಸ್ಟಿನಿ' ಭಾಷಣ ಪ್ರಸಿದ್ಧವಾಗಿದೆ. (It is considered to be one of the greatest speeches of the 20th century and to be a landmark oration that captures the essence of the triumphant culmination of the largely non-violent Indian independence struggle against the British Empire in India. (Tryst

# ಚಂದ್ರಶೇಖರ ವೆಂಕಟರಾಮನ್ (ಸಿ.ವಿ.ರಾಮನ್)

ಚಂದ್ರಶೇಖರ ವೆಂಕಟಾರಾಮನ್, ನವೆಂಬರ್ 7, 1888 ರಲ್ಲಿ ತಮಿಳುನಾಡುನ ತಿರುಚಿನಾಪಳ್ಳಿ ಜಿಲ್ಲೆಯ 'ತಿರುವನೈಕಾವಲ್' ಎಂಬಲ್ಲಿ ಜನಿಸಿದರು. ಅವರ ತಂದೆ, ಚಂದ್ರಶೇಖರ್ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ತಾಯಿಯವರ ಹೆಸರು, ಪಾರ್ವತಿ ಅಮ್ಮಾಳ್. ಆದರೆ ಕುಟುಂಬ ದೊಡ್ಡದಾಗಿದ್ದರಿಂದ ಬಡತನದ ಸ್ಥಿತಿಯಲ್ಲಿದ್ದರು. ರಾಮನ್‌ಗೆ ಸಾಕಷ್ಟು ಶೈಕ್ಷಣಿಕ ಸೌಕರ್ಯಗಳನ್ನು ಒದಗಿಸುವ ಅನುಕೂಲ ಅವರಿಗಿರಲಿಲ್ಲ. ಮೇಧಾವಿಯಾಗಿದ್ದ ರಾಮನ್ ವಿದ್ಯಾಭ್ಯಾಸ ಹಾಗೂ ವೃತ್ತಿಜೀವನದಲ್ಲಿ ಮಾಡಿದ ಸಾಧನೆ ಅಪಾರವಾಗಿತ್ತು.



ಇವರು ತಮ್ಮ 12 ನೆ ವಯಸ್ಸಿನಲ್ಲೇ ಮೆಟ್ರಿಕ್ಯುಲೇಶನ್ ಮುಗಿಸಿದರು. ನಂತರ 1904 ರಲ್ಲಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಪದವಿ, 1907 ರಲ್ಲಿ ಎಂ. ಎಸ್ಸಿ. ಪದವಿ ಮುಗಿಸಿ 1907ರಲ್ಲಿ ಭಾರತೀಯ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಲ್ಕತ್ತದಲ್ಲಿ, ಡೆಪ್ಯುಟಿ ಅಕೌಂಟೆಂಟ್ ಜನರಲ್ ಆಗಿ ವೃತ್ತಿ–ಜೀವನ ಆರಂಭಿಸಿದರು, ವಿದ್ಯಾರ್ಥಿಯಾಗಿದ್ದಾಗ ವೈಜ್ಞಾನಿಕ ಪ್ರಯೋಗಗಳಲ್ಲಿ ತೋರುತ್ತಿದ್ದ ಆಸಕ್ತಿಯನ್ನು ಅವರು ವೃತ್ತಿನಿರತರಾಗಿದ್ದಾಗಲೂ ಮುಂದುವರಿಸಿದರು.

ಇವರು 6 ಮೇ, 1907 ರಲ್ಲಿ ಲೋಕಸುಂದರಿ ಅಮ್ಮಾಳ್ ಎಂಬ ಹುಡುಗಿಯೊಂದಿಗೆ ವಿವಾಹವಾದರು. 'ರಾಮನ್,' ಮತ್ತು 'ಲೋಕಸುಂದರಿ ಅಮ್ಮಾಳ್' ದಂಪತಿಗಳಿಗೆ ಚಂದ್ರಶೇಖರ್ ಮತ್ತು

ರಾಧಾಕೃಷ್ಣನ್, ಎಂಬ ಇಬ್ಬರು ಗಂಡುಮಕ್ಕಳಿದ್ದಾರೆ. 1917ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರದ ಪ್ರಾಚಾರ್ಯರಾದರು, 1924ರಲ್ಲಿ 'ಲಂಡನಿನ ಫೆಲೊ ಆಫ್ ರಾಯಲ್ ಸೊಸೈಟಿ'ಗೆ ರಾಮನ್ ಆಯ್ಕೆಯಾದರು, ನಂತರ ಮಾರ್ಚ್ 16 1928ರಲ್ಲಿ ತಮ್ಮ ಶೋಧನೆ, 'ರಾಮನ್ ಎಫೆಕ್ಟ್'ನ್ನು 'ಬೆಂಗಳೂರಿ'ನಲ್ಲಿ ಬಹಿರಂಗ ಪಡಿಸಿದ ರಾಮನ್, 1930ರಲ್ಲಿ ಅದಕ್ಕಾಗಿ 'ನೋಬೆಲ್ ಪ್ರಶಸ್ತಿ' ಗಳಿಸಿದರು.

ಶಿಕ್ಷಣ ವಲಯದಲ್ಲಿ ಸುಪ್ರಸಿದ್ಧರಾಗಿದ್ದ, ಚಂದ್ರಶೇಖರ ವೆಂಕಟರಾಮನ್ ರವರು, ನೋಬೆಲ್ ಪ್ರಶಸ್ತಿ ಗಳಿಸಿದ, ಪ್ರಪ್ರಥಮ ಭಾರತೀಯ ವಿಜ್ಞಾನಿ. ಈ ಪ್ರಶಸ್ತಿಯನ್ನು 1930 ರಲ್ಲಿ ಅವರದೇ ಹೆಸರಿಂದ ಅಲಂಕೃತವಾದ "ರಾಮನ್ ಎಫೆಕ್ಟ್" ಎಂಬ ಶೋಧನೆಗಾಗಿ ಭೌತಶಾಸ್ತ್ರ ಕ್ಷೇತ್ರದಲ್ಲಿ ಪಡೆದರು.

**ರಾಮನ್ ಪರಿಣಾಮ**

ಆಕಾಶದ ನೀಲಿ ಬಣ್ಣ ಅವರನ್ನು ಸ್ಥಬ್ಧರನ್ನಾಗಿ ಮಾಡಿತ್ತು. ಅದು ಹೇಗೆ ಸಾಧ್ಯ ಎಂಬ ಪ್ರಶ್ನೆ ರಾಮನ್‌ರನ್ನು ಮೊದಲಿನಿಂದಲೂ ಕಾಡುತ್ತಿತ್ತು. ಅದಕ್ಕೆ ಉತ್ತರ ಕಂಡು ಹಿಡಿಯಲು ಪ್ರಯೋಗ ಮಾಡುತ್ತ ಅವರು ಬಹಳ ಸಮಯವನ್ನು ವ್ಯಯಿಸಿದರು. ಸಮುದ್ರದ ಮೇಲೆ ವಿದೇಶ ಪ್ರಯಾಣದಲ್ಲಿದ್ದಾಗ ಕಡಲಿನ ನೀಲಿ ಬಣ್ಣದ ಕಾರಣವನ್ನು ಅರಿಯಲು ಪ್ರಯೋಗ ಮಾಡುತ್ತ ಹಡಗಿನ ತುಂಬ ಅಲೆದಾಡುತ್ತಿದ್ದರು. ಆಕಾಶದ ನೀಲಿ ಬಣ್ಣ ರಾಮನ್‌ರ ಕುತೂಹಲ ಕೆರಳಿಸಿ ಪ್ರಯೋಗಕ್ಕೆ ತೊಡಗಿಸಿತು. ಹಾಗೇ ಬಗೆ-ಬಗೆಯ ಹೂಗಳ ಬಣ್ಣದಿಂದಲೂ ಅವರು ಆಶ್ಚರ್ಯ ಚಕಿತರಾಗುತ್ತಿದ್ದರು. ವಾತಾವರಣದಲ್ಲಿಯ ಧೂಳಿನ ಕಣಗಳು ಬೆಳಕನ್ನು ಭಾಗಶಃ ಚದುರಿಸುವವು. ಹೀಗೆ ಬೆಳಕು ಚದುರಿದಾಗ, ಅದರ ಎಲ್ಲ ಬಣ್ಣಗಳೂ ಚದುರುವುವು. ಹೆಚ್ಚು ಚದುರದ ಕೆಂಪುಬೆಳಕು ದಿಗಂತದ ಸಮೀಪ ಸೂರ್ಯಕಾಣುವ ಪ್ರದೇಶದಲ್ಲಿ ಪ್ರಜ್ವಲಿಸುವುದು. ಉಳಿದದ್ದು ಆಕಾಶಕ್ಕೆ ನೀಲಿ ಬಣ್ಣವನ್ನು ನೀಡುವುದು. ಬೆಳಕು ಚದುರುವಾಗ ಶಕ್ತಿಯ ಸ್ವೀಕಾರ ಅಥವಾ ದಾನ ಬೆಳಕಿನ ತರಂಗಾಂತರವನ್ನು ನಿರ್ದಿಷ್ಟವಾಗಿ ಬದಲಾಯಿಸುವ ಸಾಧ್ಯತೆ ಲಕ್ಷ್ಯದಲ್ಲೊಂದು ಮಾತ್ರ. ಎಂದರೆ ಒಂದು ಲಕ್ಷ ಬೆಳಕಿನ ಕಣಗಳು ಚದುರಿದಾಗ ಒಂದು ಮಾತ್ರ ರಾಮನ್ ಪರಿಣಾಮಕ್ಕೆ ಒಳಗಾಗುವುದು, ಎನ್ನುವ ವಿಚಾರ ಬೆಳಕಿಗೆ ಬಂತು. ಇದನ್ನೇ "ರಾಮನ್ ಪರಿಣಾಮ" ಎಂದು ಕರೆಯಲಾಗುತ್ತದೆ. ಇದು ಅನ್ವಯಿಕ ಉಪಯುಕ್ತತೆಯುಳ್ಳ ತತ್ವ. ಈ ತತ್ವವು ವಿಜ್ಞಾನಕ್ಕೆ ಸರ್ ಸಿ.ವಿ. ರಾಮನ್‌ರ ಒಂದು ದೊಡ್ಡ ಕೊಡುಗೆಯಾಗಿದೆ.

**ರಾಮನ್ ಪುತ್ಥಳಿ (ಬಿರ್ಲಾ ಇಂಡಸ್ಟ್ರಿಯಲ್ & ಟೆಕ್ನೊಲೊಜಿಕಲ್ ಮ್ಯೂಸಿಯಂ)**

1934ರಲ್ಲಿ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಡಾ. ರಾಮನ್, ತದ ನಂತರ 1943ರಲ್ಲಿ ರಾಮನ್ ಸಂಶೋಧನಾ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಪ್ರೊ. ರಾಮನ್ ಬೆಂಗಳೂರನ್ನು ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು "ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟ್" ಎಂಬ ವಿಜ್ಞಾನ ಸಂಶೋಧನಾ ಸಂಸ್ಥೆಯನ್ನು ಅವರ ಜೀವಿತ ಕಾಲದಲ್ಲೇ ಸ್ಥಾಪಿಸಿ ಬಹಳಷ್ಟು ಸಂಶೋಧನೆಗಳನ್ನು ಮಾಡಿದರು. ಭಾವಿ ಸಂಶೋಧಕರಿಗೆ ಬಿಟ್ಟುಹೋಗಿರುವ ಈ ಸಂಸ್ಥೆ ವಿಶೇಷವಾಗಿ ಭೌತಶಾಸ್ತ್ರದ ಅತ್ಯಂತ ಪ್ರಮುಖ ಸಂಶೋಧನ ಸಂಸ್ಥೆಯಾಗಿದೆ.

**ಪ್ರಶಸ್ತಿಗಳು :** ಗಮನಾರ್ಹ ಪ್ರಶಸ್ತಿಗಳು ನೈಟ್ ಬ್ಯಾಚುಲರ್ (1929), ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ (1930), ಭಾರತ ರತ್ನ (1954), ಲೆನಿನ್ ಶಾಂತಿ ಪ್ರಶಸ್ತಿ(1957), ಸಂಗಾತಿ ಲೋಕ ಸುಂದರಿ ಅಮ್ಮಾಳ್ (1907–1970).





# ಸೌದರ್ಯವರ್ಧಕವಾಗಿ ಪಪ್ಪಾಯಿ ಬಳಕೆ

ವೇದಾವತಿ ಹೆಚ್.ಎಸ್., ಬೆಂಗಳೂರು

ಪಪ್ಪಾಯಿ ಹಣ್ಣಿನ ಸೇವನೆಯಿಂದ ಆರೋಗ್ಯಕ್ಕೆ ಅನೇಕ ಲಾಭಗಳಿವೆ. ಈ ಹಣ್ಣನ್ನು ಯಾರು ಬೇಕಾದರೂ ತಿನ್ನಬಹುದು. ಆರೋಗ್ಯದ ಜೊತೆಗೆ ಸೌದರ್ಯವರ್ಧಕವಾಗಿಯೂ ಪಪ್ಪಾಯಿ ಹಣ್ಣನ್ನು ಬಳಸಬಹುದು. ನಿಯುಮಿತವಾಗಿ ಪಪ್ಪಾಯಿ ಬಳಸುವುದರಿಂದ ಸೌಂದರ್ಯವನ್ನು ಹೇಗೆ ಹೆಚ್ಚಿಸಿಕೊಳ್ಳಬಹುದು ತಿಳಿಯೋಣ.

- ಪಪ್ಪಾಯಿ ಹಣ್ಣಿನಲ್ಲಿ ಎ, ಬಿ, ಸಿ, ಮತ್ತು ಜಿ ಮಿನರಲ್ಸ್ ಹೇರಳವಾಗಿದೆ, ಇದು ಸ್ಕಿನ್ ಡ್ಯಾಮೇಜ್ ಆಗುವುದನ್ನು ತಡೆಗಟ್ಟುತ್ತದೆ.
- ಪಪ್ಪಾಯಿ ಹಣ್ಣನ್ನು ನಿಯಮಿತವಾಗಿ ತಿನ್ನುವುದರಿಂದ ಬೊಜ್ಜಿನ ಸಮಸ್ಯೆಯನ್ನು ದೂರ ಮಾಡಬಹುದು.
- ಮಲಬದ್ಧತೆ, ಕೈ-ಕಾಲುಗಳ ಊತ, ಹೊಟ್ಟೆಶೂಲೆ, ಸಂಧಿವಾತ, ಕ್ಷಯರೋಗಕ್ಕೆ ಪಪ್ಪಾಯಿ ಹಣ್ಣು ದಿವ್ಯೌಷಧಿ.
- ಪಪ್ಪಾಯಿ ಹಣ್ಣನ್ನು ಸೌಂದರ್ಯವರ್ಧಕವಾಗಿ ಉಪಯೋಗಿಸಲಾಗುತ್ತದೆ.
- ಮುಖಕ್ಕೆ ಮಾಸ್ಕಿನಂತೆ ಬಳಸಿದಾಗ ಮುಖದ ಮೇಲಿನ ಸುಕ್ಕುಗಳು ಮಾಯವಾಗಿ ಚರ್ಮ ಕಾಂತಿಯುತವಾಗುತ್ತದೆ.
- ಪಪ್ಪಾಯಿ ಕಾಯಿಯ ಸೇವನೆಯಿಂದ ಹೊಟ್ಟೆಯಲ್ಲಿನ ಹುಳುಗಳು ನಾಶವಾಗುತ್ತದೆ.
- ಪಪ್ಪಾಯಿ ಹಣ್ಣಿನ ಸೇವನೆಯಿಂದ ಕೆಟ್ಟ ಕೊಲೆಸ್ಟ್ರಾಲ್ ಅಂಶವನ್ನು ಕಡಿಮೆ ಮಾಡಿಕೊಳ್ಳಬಹುದು.
- ಮಧುಮೇಹ ನಿಯಂತ್ರಣಕ್ಕೆ ಪಪ್ಪಾಯಿ ಒಳ್ಳೆಯದು.
- ಕಣ್ಣಿನ ಆರೋಗ್ಯಕ್ಕೆ ಪಪ್ಪಾಯಿ ಹಣ್ಣಿನ ಸೇವನೆ ಒಳ್ಳೆಯದು.
- ಕೂದಲ ಬೆಳವಣಿಗೆಗೆ ಪಪ್ಪಾಯಿ ಹಣ್ಣಿನ ಸೇವನೆ ಒಳ್ಳೆಯದು.
- ಪಪ್ಪಾಯಿ ಹಣ್ಣಿನಲ್ಲಿ ವಿಟಮಿನ್ 'ಸಿ' ಇರುವುದರಿಂದ ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವರು ಸೇವನೆ ಮಾಡುವುದರಿಂದ ಆರೋಗ್ಯಕ್ಕೆ ಒಳ್ಳೆಯದು.

### ಸಂಪ್ರೀತಿ ಸುಘೋಷ



ಯಾರು ವಿವೇಕ ಜ್ಞಾನದಿಂದ
ತನ್ನ ಅಸ್ತಿತ್ವದ ಸ್ವರೂಪವನ್ನು
ತಿಳಿಯಲು ಪ್ರಯತ್ನಿಸುತ್ತಾರೋ
ಅವರು ಸದಾ ಸುಖಿಗಳಾಗಿರುತ್ತಾರೆ.

ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ





# "ಸುಭಾಷಿತಾನಿ"

✍ ವಿ.ಮಲ್ಲಣ್ಣ, ವಿಷಯ ಪರಿವೀಕ್ಷಕರು, ಮೈಸೂರು ವಲಯ

ಸುಭಾಷಿತಗಳಲ್ಲಿ ಎಲ್ಲಾ ವಿಷಯಗಳಿಗೂ ಸಹ ಸ್ಥಾನವಿದೆ. ಶೃಂಗಾರ, ವಿರಹ, ಅಸೂಹೆ, ಹಣ, ವಿದ್ಯೆ, ಕೀರ್ತಿ, ಆಯುಷ್ಯ, ಸಂಸಾರ, ದೇವರು, ಉದ್ಯೋಗ, ವಿಧಿ, ನೀತಿ, ಧರ್ಮ, ಹಾಸ್ಯ, ಚುಚ್ಚುನುಡಿ, ವ್ಯವಹಾರ ಉಪದೇಶ ಹೀಗೆ ಪ್ರತಿಯೊಂದು ಸಹ ಒಂದೊಂದು ಮುತ್ತಿನಂತಿರುವುದೆಂದರೆ ತಪ್ಪಾಗಲಾರದು. ಮಾನವನ ಜೀವನಕ್ಕೆ ಉಪಯೋಗವಾಗುವ ಹಲವಾರು ಅಂಶಗಳನ್ನು ಈ ಸುಭಾಷಿತಗಳು ತಿಳಿಸುತ್ತವೆ. ಆದ್ದರಿಂದಲೇ ಇಂತಹ ಸುಭಾಷಿತಗಳನ್ನು ಗೌರವಿಸಿ, ಸಂಗ್ರಹಿಸಿ ಪ್ರಾಚೀನ ಕಾಲದಿಂದಲೂ ಜನರು ಸುಭಾಷಿತಗಳ ಮೇಲೆ ಹೆಚ್ಚು ಆಕರ್ಷಣೆ ಹೊಂದಿರುವುದು ಕಂಡುಬರುತ್ತಿದೆ.

**ಪ್ರಾಪ್ತವ್ಯಂ ಅರ್ಥಂ ಲಭತೆ ಮನುಷ್ಯಃ**
**ದೇವೋಪಿ ತಂ ಲಂಘಯಿತುಂ ನ ಶಕ್ತಃ ।**
**ತಸ್ಮಾನ್ನ ಶೋಚಾಮಿ ನ ವಿಸ್ಮಯಾಃ ಮ**
**ಯದಸ್ಮದೀಯಂ ನ ಹಿ ತತ್ ಪರೇಷಾಮ್ ॥**

ಮಾನವನಿಗೆ ರೂಪ, ಗುಣ, ವಿದ್ಯೆ, ಹಣ, ಆಯುಷ್ಯ, ಆರೋಗ್ಯ ಮುಂತಾದವು ಜನ್ಮ ಕಾಲಕ್ಕಿಂತ ಮೊದಲೇ ನಿರ್ಧಾರವಾಗುತ್ತವೆ. ಎಷ್ಟನ್ನು ಮಾನವನು ಪಡೆಯಲು ಅರ್ಹನೋ ಅದನ್ನು ಪಡೆದೇ ಪಡೆಯುತ್ತಾನೆ. ಅದನ್ನು ತಡೆಯುವುದು ಭಗವಂತನಿಂದಲೂ ಸಾಧ್ಯವಿಲ್ಲ. ಆದ್ದರಿಂದ ನಾನು ದುಃಖಿಸುವುದಿಲ್ಲ, ಆಶ್ಚರ್ಯ ಪಡುವುದಿಲ್ಲ. ನನ್ನದಾಗಬೇಕೆಂದಿರುವುದು. ಬೇರೆಯವರಾದ್ದಾಗುವುದಿಲ್ಲ ಎಂಬ ವಿಶ್ವಾಸದಿಂದ ನಾನು ಬದುಕುತ್ತೇನೆ. ಎಂಬುದು ವಿಚಾರ ಶೀಲನ ಅಭಿಪ್ರಾಯ. ಹೆಚ್ಚಿನದನ್ನು ಬಯಸದೇ ಇದ್ದುದರಲ್ಲಿಯೇ ತೃಪ್ತಿಪಡಬೇಕೆಂಬುದು ಇಲ್ಲಿ ಸೂಚಿತವಾಗಿದೆ.

**ಆಹಾರರ್ಥಂ ಕರ್ಮ ಕುರ್ಯಾದನಿಂದ್ಯಂ**
**ಕುರ್ಯಾದಾಹಾರಂ ಪ್ರಾಣ ಸಂಧಾರಣಾರ್ಥಂ ।**
**ಪ್ರಾಣಾಃ ಸಂಧಾರ್ಯಾಃ ತತ್ವ ವಿಜ್ಞಾನ ಹೇತೊ ಃ**
**ತತ್ವಂ ವಿಜ್ಞೇಯಂ ಯೇನ ಭೂಯೋ ನ ಜನ್ಮ ॥**

ಕೆಲಸ, ಆಹಾರ, ಬದುಕುವುದು, ಜ್ಞಾನ ಮತ್ತು ಸಂಸಾರದಿಂದ ಬಿಡುಗಡೆ, ಈ ಅಂಶಗಳನ್ನು ಇಲ್ಲಿ ಸುಂದರವಾಗಿ ಹೊಂದಿಸಿ ಹೇಳಿದ್ದಾರೆ. ನಾವು ಆಹಾರವನ್ನು ಪಡೆಯುವುದಕ್ಕಾಗಿ ನಿಂದ್ಯವಲ್ಲದ ಕೆಲಸ ಮಾಡಬೇಕು. ಇನ್ನೊಬ್ಬರಿಗೆ ತೊಂದರೆಯಾಗುವ ಅಥವಾ ನೋವಾಗುವ ರೀತಿಯ ಕಾರ್ಯಮಾಡಬಾರದು. ಆಹಾರವನ್ನು ಜೀವ ಸಂರಕ್ಷಣೆಗಾಗಿ ಸ್ವೀಕರಿಸಬೇಕು. ಇದೆಯೆಂದು ಅಥವಾ ರುಚಿಗಾಗಿ ಬೇಕಾದಷ್ಟು ತಿಂದು ರೋಗಿಯಾಗಬಾರದು. ಜ್ಞಾನವನ್ನು ಪಡೆಯಲು ಬದುಕಿರಬೇಕು. ತತ್ವ ವಿಜ್ಞಾನಗಳನ್ನು ತಿಳಿಯಲು ಪ್ರಯತ್ನಿಸಬೇಕು. ಜ್ಞಾನವನ್ನು ಏಕೆ ಗಳಿಸಬೇಕೆಂದರೆ, ಅಜ್ಞಾನ ನಿವೃತ್ತಿಯಾಗಬೇಕು. ಅಜ್ಞಾನದಿಂದ ಬಂದ ಜನ್ಮ – ಜನ್ಮಾಂತರಗಳ ದುಃಖ ದೂರವಾಗಬೇಕು. ಹೀಗೆ ಉತ್ತಮ ಕಾರ್ಯ ಮಾಡಿ ಆಹಾರ ಸಂಪಾದಿಸಿ ಬದುಕಿ ಜ್ಞಾನಿಯಾಗಿ ಜೀವನ ಕಾಲವನ್ನು ಸಫಲಗೊಳಿಸಿಕೊಳ್ಳಬೇಕೆಂದಿಲ್ಲಿ ತಿಳಿಸಲಾಗಿದೆ.

**ಸರ್ವೇಷಾಮೇವ ಶೌಚಾನಾಮ್**
**ಅರ್ಥಶೌಚಮ್ ಪರಂ ಸ್ಮೃತಂ ।**
**ಯೋ಼ರ್ಥೇ ಶುಚಿಃ ಹಿ ಸ ಶುಚಿಃ**
**ಸ ಮೃದ್ವಾರಿಭಿಃ ಶುಚಿಃ ಶುಚಿಃ ॥**



ದೇಹ ಶುದ್ಧಿ, ಮನಸ್ಸು ಶುದ್ಧಿ, ವ್ಯವಹಾರ ಶುದ್ಧಿ, ಹಣಕಾಸಿನ ಶುದ್ಧಿ, ಮುಂತಾದ ಶುದ್ಧಿಗಳಲ್ಲಿ ಹಣಕಾಸಿನ ಶುದ್ಧಿಯು ಶ್ರೇಷ್ಠವಾಗುವುದು. ಮಣ್ಣು ಮುಂತಾದ ವಸ್ತುಗಳಿಂದ ಶುದ್ಧತೆ ಉಂಟಾದರೂ ವ್ಯವಹಾರದಲ್ಲಿ ಪ್ರಾಮಾಣಿಕನಾಗಿದ್ದರೆ ಮಾತ್ರವೇ ಸರ್ವ ಶುದ್ಧಿ ಹೊಂದಿದಂತಾಗುವುದು. ಯಾರು ಹಣಕಾಸಿನ ವಿಷಯದಲ್ಲಿ ಶುದ್ಧನಾಗಿರುವುದಿಲ್ಲವೋ ಅವರು ಇತರ ಶುದ್ಧಿಗಳನ್ನು ಹೊಂದಿದ್ದರೂ ವ್ಯರ್ಥವೆನಿಸುವುದು. ಕಲಿಯುಗದಲ್ಲಿ ಹಣ ಕೊಡುವ, ತೆಗೆದು ಕೊಳ್ಳುವ ವ್ಯವಹಾರವು ಅತ್ಯಂತ ಪ್ರಾಮಾಣಿಕವಾಗಿರಬೇಕೆಂದೂ ಆಡಿದ ಮಾತಿಗೆ ಸರಿಯಾಗಿರಬೇಕೆಂದು ಈ ಮೇಲಿನ ಸುಭಾಷಿತ ತಿಳಿಸುವುದು.

**ಗುಣಾನಾಂ ಅಂತರಂ ಪ್ರಾಯಃ**
**ತಜ್ಞೋ ಜಾನಾತಿ ನೇತರಃ ।**
**ಮಾಲತೀ ಮಲ್ಲಿಕಾಯೋದಂ**
**ಘೂಣಂ ವೇತ್ತಿ ಸ ಲೋಚನಂ ॥**

ಗುಣಗಳ ಅಂತರವನ್ನು ಗುಣಜ್ಞರೇ ತಿಳಿಯಲು ಸಾಧ್ಯವಿದೆ. ಬೇರೆಯವರಿಗೆ ಅದರ ಮಹತ್ವದ ಅರಿವು ಇರುವುದಿಲ್ಲ. ಮಲ್ಲಿಗೆ ಮತ್ತು ಜಾಜಿ ಹೂವುಗಳ ಸುವಾಸನೆಯ ಅಂತರವನ್ನು ಮೂಗು ಅರಿಯಬಲ್ಲುದು. ಅದನ್ನು ಕಣ್ಣು ತಿಳಿಯುವುದಿಲ್ಲ. ಜಗತ್ತಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಬಲ್ಲವರಿದ್ದಾರೆ. ಎಲ್ಲಾ ಬಲ್ಲವರು ಯಾರು ಇಲ್ಲ ಆಯಾ ಕ್ಷೇತ್ರಗಳ ಬಗ್ಗೆ ಅದನ್ನು ತಿಳಿದವರಿಂದಲೇ ತಿಳಿಯಬೇಕು ಎಂದಿಲ್ಲಿ ಸೂಚಿಸಿದ್ದಾರೆ.

**ಜನನೀ ಜಠರ ವ್ಯಾಧಿಃ ಬಂಧೂನಾಂ**
**ಆಧಿ ಅಪಗುಣಃ ಪುರುಷಃ ।**
**ಏತತ್ಕ್ರತೋ ಧರಿತ್ರ್ಯಾಃ ಭಾರೋ**
**ಹರಿಣಾಪ್ಯನಪನೇಯಃ ॥**

ಯಾವ ಮನುಷ್ಯನು ಯಾವುದೇ ಉತ್ತಮ ಗುಣವನ್ನು ಹೊಂದಿರುವುದಿಲ್ಲವೋ, ಅವನು ಭೂವಿಗೆ ಭಾರವೆನಿಸುತ್ತಾನೆ. ಎಲ್ಲರಿಗೂ ಉಪಕಾರ ಮಾಡದವನಾಗುತ್ತಾನೆ. ಹುಟ್ಟಿಸಿದ ತಾಯಿಯ ಹೊಟ್ಟೆಗೆ ರೋಗದಂತಾಗುತ್ತಾನೆ. ಬಂಧುಗಳಿಗೆ ಮಾನಸೀಕ ಪೀಡಕನಾಗುತ್ತಾನೆ. ಅಂತಹವನನ್ನು ಭಗವಂತನು ಸಹ ಸರಿಪಡಿಸಲಾರನು. ಇಂತಹವರಿಂದಾದ ಭೂಭಾರವನ್ನು ಪರಮಾತ್ಮನೂ ದೂರ ಮಾಡಲಾರನು.

ಹೀಗೆ ಮನುಷ್ಯ ಈ ಜಗತ್ತಿನಲ್ಲಿದ್ದೂ ಯಾವುದಾದರೂ ಸಾಧನೆಯಲ್ಲಿ ತೊಡಗಿ ಗುಣವಂತನಾಗಬೇಕೆಂದು ಈ ಸುಭಾಷಿತ ತಿಳಿಸುತ್ತದೆ.

**ಸಃ ಸುಹೃತ್ ವ್ಯಸನೇ ಯಃ ಸ್ಯಾತ್**
**ಸ ಪುತ್ರ ಯಸ್ತು ಭಕ್ತಿಮಾನ್ ।**
**ಸ ಭೃತ್ಯೋ ಯೋ ವಿಧೇಯಜ್ಞಃ**
**ಸಾ ಭಾರ್ಯಾ ಯತ್ರ ನಿರ್ವೃತಿಃ ॥**


ನಿಜವಾದ ರೀತಿಯಲ್ಲಿ ಮಿತ್ರ, ಹೆಂಡತಿ, ಮಗ, ಸೇವಕರು ಯಾರು ಆಗುವರು ಎಂಬುದನ್ನು ಈ ಶ್ಲೋಕದಲ್ಲಿ ವಿವರಿಸಿದೆ. ಯಾರು ಕಷ್ಟಕಾಲದಲ್ಲಿ ಸಹಾಯ ಮಾಡುತ್ತಾರೋ ಅವನೇ ನಿಜವಾದ ಮಿತ್ರನಾಗಿದ್ದಾನೆ. ಯಾವನು ಹಿರಿಯರಲ್ಲಿ ಭಕ್ತಿಯನ್ನು ಹೊಂದಿರುತ್ತಾರೋ ಅವರೇ ನಿಜವಾದ ಪುತ್ರರೂ, ವಿಧೇಯನಾಗಿರುವವನೇ ನಿಜವಾದ ಸೇವಕನು. ಮತ್ತು ಯಾವಳು ಪತಿಯ ಸಂತೋಷವನ್ನೇ ಬಯಸುತ್ತಾಳೋ ಅವಳೇ ನಿಜವಾದ ಪತ್ನಿಯು ಎಂದು ಇಲ್ಲಿ ವಿವರಿಸಿದ್ದಾರೆ.

**ಅಜ್ಞಃ ಸುಖವಮಾರಾಧ್ಯಃ**
**ಸುಖತರಮಾರಾಧ್ಯತೆ ವಿಶೇಷಜ್ಞಃ ।**
**ಜ್ಞಾನಲವದುರ್ವಿದಗ್ದಂ**
**ಬ್ರಹ್ಮಾಪಿ ನರಂ ನ ರಂಜಯತಿ ॥**

ಬುದ್ಧಿಮಟ್ಟವನ್ನು ಆಧರಿಸಿ ಮೂರು ರೀತಿಯ ಜನರಿದ್ದಾರೆಂದು ಇಲ್ಲಿ ವಿಭಾಗಿಸಿದ್ದಾರೆ. ಪ್ರಾಜ್ಞರು, ಅಜ್ಞರು ಮತ್ತು ಅರ್ಧತಿಳಿದವರು. ಈ ಮೂವರಲ್ಲಿ ಅಜ್ಞರನ್ನು ಸುಲಭವಾಗಿ ಸಮಾಧಾನಪಡಿಸಬಹುದು. ವಿಶೇಷಜ್ಞರನ್ನು ಹೆಚ್ಚು ಸುಲಭವಾಗಿ ಸಮಾಧಾನ ಪಡಿಸಬಹುದು. ಆದರೆ ಅರ್ಧರ್ಧ ತಿಳಿದವರನ್ನು ಬ್ರಹ್ಮನೇ ಬಂದರೂ ಸಮಾಧಾನ ಪಡಿಸಲಾಗದು. ಅವನು ಹೇಳಿದ್ದನ್ನೇ ಕೇಳುವುದಿಲ್ಲ. ತನಗೂ ತಿಳಿಯುವುದಿಲ್ಲ. ಎಲ್ಲದಕ್ಕೂ ಸಂಶಯದಲ್ಲಿದ್ದು ತೊಂದರೆ ಅನುಭವಿಸುತ್ತಾನೆ. ॐ

# ಲಾಲ್ ಕೃಷ್ಣ ಅಡ್ವಾಣಿ

# (ಎಲ್.ಕೆ. ಅಡ್ವಾಣಿ)




ಭಾರತೀಯ ಜನತಾ ಪಕ್ಷದ (ಬಿಜೆಪಿ) ಅತ್ಯಂತ ಹಿರಿಯ ಮುಖಂಡರಲ್ಲಿ ಲಾಲ್ ಕೃಷ್ಣ ಅಡ್ವಾಣಿ ಅಗ್ರಗಣ್ಯರು. 1941ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್ ಎಸ್ ಎಸ್)ದ ಸ್ವಯಂ ಸೇವಕರಾಗಿ ತಮ್ಮ 14ನೇ ವರ್ಷದಲ್ಲಿ ಸೇರ್ಪಡೆಗೊಳ್ಳುವ ಮೂಲಕ ಸಾಮಾಜಿಕ ಜೀವನಕ್ಕೆ ಪಾದಾರ್ಪಣೆ ಮಾಡಿದರು. ನಂತರದಲ್ಲಿ ಪೂರ್ಣ ಪ್ರಮಾಣದಲ್ಲಿ ಕರಾಚಿ ವಿಭಾಗದಲ್ಲಿ ಪ್ರಚಾರಕರಾಗಿ, ವಿವಿಧ ಶಾಖೆಗಳ ಆರಂಭಕ್ಕೆ ಕಾರಣರಾದರು. ಭಾರತ–ಪಾಕ್ ಬೇರ್ಪಟ್ಟ ನಂತರ ರಾಜಸ್ಥಾನದ ಮತ್ಸ್ಯಾ–ಆಳ್ವರ್ ಪ್ರದೇಶಕ್ಕೆ ಪ್ರಚಾರಕ್ಕಾಗಿ ಕಳುಹಿಸಲ್ಪಟ್ಟರು. ಅಲ್ಲಿ ಭಾರತ–ಪಾಕ್ ಬೇರ್ಪಟ್ಟ ಕಾರಣಕ್ಕೆ ಜನಾಂಗೀಯ ಅಥವಾ ಕೋಮು ಗಲಭೆ ಆರಂಭಗೊಂಡಿತು. ಆದಾಗ್ಯೂ ಸಮಾಜದಲ್ಲಿ ಶಾಂತಿ ಕಾಪಾಡುವ ನಿಟ್ಟಿನಲ್ಲಿ ಭರತ್ ಪುರ, ಕೋಟಾ, ಬುಂದಿ ಮತ್ತು ಜಾಲ್ವಾರ್ ಜಿಲ್ಲೆಗಳಲ್ಲಿ 1952 ರವರೆಗೆ ನೆಲೆಸಿದ್ದರು.


ನಂತರದಲ್ಲಿ ಅಡ್ವಾಣಿ ಅವರು ಆರ್.ಎಸ್.ಎಸ್ ಮತ್ತು ಶ್ಯಾಮ್ ಪ್ರಸಾದ್ ಮುಖರ್ಜಿ ಅವರೊಂದಿಗೆ ಸೇರಿ 1951ರಲ್ಲಿ ಭಾರತೀಯ ಜನಸಂಘ ಎಂಬ ರಾಜಕೀಯ ಪಕ್ಷ ಸ್ಥಾಪಿಸಿದರು. 1957ರಲ್ಲಿ ದೆಹಲಿಗೆ ತೆರಳಿ ಸಂಸದೀಯ ವ್ಯವಹಾರಗಳಲ್ಲಿ ಪಾಲ್ಗೊಳ್ಳತೊಡಗಿದರು. ನಂತರದಲ್ಲಿ ದೆಹಲಿಯ ಜನಸಂಘದ ಕಾರ್ಯದರ್ಶಿ ಮತ್ತು ಕೆಲವೇ ದಿನಗಳಲ್ಲಿ ಅಧ್ಯಕ್ಷರಾಗಿ ಪದೋನ್ನತಿ ಪಡೆದರು. 1967ರಲ್ಲಿ ದೆಹಲಿಯ ನಗರಸಭೆಗೆ ನಡೆದ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಆರ್.ಎಸ್.ಎಸ್.ನ ವಾರಪತ್ರಿಕೆಯ ನಿರ್ವಾಹಕರಾಗಿ, 1966ರಲ್ಲಿ ರಾಷ್ಟ್ರೀಯ ಆಡಳಿತ ಮಂಡಳಿಗೆ ನೇಮಕಗೊಂಡರು.

1970ರಿಂದ ದೆಹಲಿಯಿಂದ ರಾಜ್ಯಸಭೆಗೆ 6 ವರ್ಷಗಳ ಕಾಲ ನೇಮಕಗೊಂಡರು. ಜನಸಂಘದ ವಿವಿಧ ಹುದ್ದೆಗಳನ್ನು ನಿರ್ವಹಿಸಿ 1973 ರಲ್ಲಿ ಖಾನ್‌ಪುರ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ನೇಮಕಗೊಂಡರು. 1976 ರಿಂದ 1982 ರವರೆಗೆ ಗುಜರಾತ್‌ನಿಂದ ರಾಜ್ಯಸಭಾ ಸದಸ್ಯರಾಗಿ ಮುಂದುವರೆದರು. ಇಂದಿರಾ ಗಾಂಧಿ ಅವರ ತುರ್ತುಪರಿಸ್ಥಿತಿ ಸಂದರ್ಭದ ನಂತರದಲ್ಲಿ ಜನಸಂಘ ಸೇರಿದಂತೆ ಹಲವು ರಾಜಕೀಯ ಪಕ್ಷಗಳು ಜನತಾ ಪಾರ್ಟಿಯಲ್ಲಿ ವಿಲೀನಗೊಂಡವು. ಅಡ್ವಾಣಿ ಮತ್ತು ಅವರ ಜತೆಗಾರ ಅಟಲ್ ಬಿಹಾರಿ ವಾಜಪೇಯಿ ಅವರು ಲೋಕಸಭೆಗೆ ಜನತಾ ಪಕ್ಷದಿಂದ 1977 ರಲ್ಲಿ ಸ್ಪರ್ಧಿಸಿದರು. ನಂತರದಲ್ಲಿ ಅಡ್ವಾಣಿ ಅತಿ ಪ್ರಮುಖ ನಾಯಕರಾಗಿ ಹೊರಹೊಮ್ಮಿದರು ಮತ್ತು ಭಾರತೀಯ ಜನತಾ ಪಾರ್ಟಿಯ ಸಂಸ್ಥಾಪಕರಲ್ಲಿ ಒಬ್ಬರಾದರು. ನಂತರ 1982ರಿಂದ ಮಧ್ಯಪ್ರದೇಶದಿಂದ ಬಿಜೆಪಿ ಪಕ್ಷದಿಂದ ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿ ಪುನರಾಯ್ಕೆಯಾದರು. ॐ

**ಸಮೃದ್ಧಿ ಸುಜ್ಞಾನ**

**ಕಿತ್ತುಕೊಂಡು ತಿನ್ನುವವರ ಹೊಟ್ಟೆ ಎಂದಿಗೂ ತುಂಬುವುದಿಲ್ಲ. ಹಂಚಿಕೊಂಡು ತಿನ್ನುವವರು ಎಂದಿಗೂ ಉಪವಾಸ ಮಲಗುವುದಿಲ್ಲ.**

# ಗುರುನಾನಕ್  ಜಯಂತಿ



ಸಿಕ್ಖ್ ಮತದ ಸಂಸ್ಥಾಪಕರಾದ ಗುರು ನಾನಕ್ ಅವರ ಜಯಂತಿಯನ್ನು ಇಂದು ದೇಶದಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ. ಪ್ರತಿವರ್ಷ ಕಾರ್ತಿಕ ಮಾಸದ ಹುಣ್ಣಿಮೆಯಂದು ಬರುವ ಗುರು ನಾನಕ್ ಜಯಂತಿಯನ್ನು ಸಮಸ್ತ ಸಿಕ್ಖ್ ಬಾಂಧವರು ಆಚರಿಸಿ, ಸಿಕ್ಖ್ ಮತದ ಮೊದಲ ಗುರುವನ್ನು ಸ್ಮರಿಸುತ್ತಾರೆ. ನಾನಕ್ ಜನಿಸಿದ್ದು ಈಗಿನ ಪಾಕಿಸ್ತಾನದ ಪಂಜಾಬ್‌ನ ನಂಕಾನ ಎಂಬಲ್ಲಿ. ತಂದೆ ಕಲ್ಯಾಣ್ ಚಂದ್ ದಾಸ್ ಬೇಡಿ, ತಾಯಿ ಮಾತಾ ತೃಪ್ತ. 15ನೇ ಶತಮಾನದಲ್ಲಿ ಇವರು ಸ್ಥಾಪಿಸಿದ ಸಿಕ್ಖ್ ಮತ ಇಂದು ಜಗತ್ತಿನ ಪ್ರಮುಖ ಮತಗಳಲ್ಲಿ ಒಂದಾಗಿದೆ.

ಗುರುಪುರಬ್ ಅಥವಾ ಗುರುನಾನಕ್ ಜಯಂತಿಯನ್ನು ಜಗತ್ತಿನಾದ್ಯಂತ ಹತ್ತು ಸಿಖ್ ಗುರುಗಳಲ್ಲಿ ಮೊದಲಿಗರು ಮತ್ತು ಸಿಖ್ ಧರ್ಮದ ಸಂಸ್ಥಾಪಕ ಗುರುನಾನಕ್ ದೇವ್ ಜಿ ಅವರ ಜನ್ಮದಿನದಂದು ಆಚರಿಸಲಾಗುತ್ತದೆ. ಸಿಖ್ ಸಮುದಾಯದ ಜನರು ಈ ದಿನವನ್ನು ಅತ್ಯಂತ ಉತ್ಸಾಹದಿಂದ ಆಚರಿಸುತ್ತಾರೆ. ಗುರುನಾನಕ್ ಅವರ ಬೋಧನೆಗಳನ್ನು ಗೌರವಿಸಲು ಸಿಖ್ ಜನರು ತಮ್ಮ ನಗರಗಳಲ್ಲಿ ವಿವಿಧ ಸ್ಥಳಗಳಲ್ಲಿ ಸ್ಟಾಲ್‌ಗಳನ್ನು ಹಾಕುತ್ತಾರೆ ಮತ್ತು ಇತರ ಜನರಿಗೆ ಆಹಾರವನ್ನು ನೀಡುತ್ತಾರೆ. ಈ ಮಂಗಳಕರ ದಿನವನ್ನು ಆಚರಿಸುವ ಸಾಮಾನ್ಯ ವಿಧಾನಗಳಲ್ಲಿ ಇದು ಒಂದಾಗಿದೆ. ಗುರುನಾನಕ್ ದೇವ್ ಜಿ ಅವರು ಸದ್ಗುಣ, ಸಮಾನತೆ, ಒಳ್ಳೆಯತನ ಮತ್ತು ಪ್ರೀತಿಯ ಧ್ವಜಧಾರಿಯಾಗಿರುವುದರಿಂದ ಅವರನ್ನು ಅತ್ಯಂತ ಧಾರ್ಮಿಕ ಚಿಂತಕರಲ್ಲಿ ಒಬ್ಬರು ಎಂದು ಪರಿಗಣಿಸಲಾಗಿದೆ.


ಇವರು ಪ್ರೀತಿ ಮತ್ತು ಒಳ್ಳೆಯ ಮಹಾನ್ ಬೋಧಕನಲ್ಲದೆ ಅವರು ಮಹಾನ್ ಕವಿಯಾಗಿದ್ದರು. ಅವರ ಆಲೋಚನೆಗಳು, ದೃಷ್ಟಿಕೋನಗಳು ಮತ್ತು ಪದಗಳನ್ನು ಸಿಖ್ ಧರ್ಮದ ಪವಿತ್ರ ಗ್ರಂಥವಾದ 'ಗುರು ಗ್ರಂಥ ಸಾಹಿಬ್' ನಲ್ಲಿ 974 ಕಾವ್ಯಾತ್ಮಕ ಸ್ತೋತ್ರಗಳ ರೂಪದಲ್ಲಿ ಪಟ್ಟಿಮಾಡಲಾಗಿದೆ. ಅವರು ಸಾಕಷ್ಟು ಪ್ರಯಾಣಿಸಿದರು ಮತ್ತು ಬುದ್ಧಿವಂತಿಕೆಯಿಂದ ತುಂಬಿದ ಜೀವನವನ್ನು ಕಳೆದರು. ಸಮಾಜದಲ್ಲಿ ಅವರು ಸಮಾನತೆ ಮತ್ತು ಒಳ್ಳೆಯತನವನ್ನು ಹೆಚ್ಚು ಗೌರವಿಸುತ್ತಿದ್ದರು. ಅವರು ಏಕತೆಯ ಸಿದ್ಧಾಂತದ ಆಧಾರದ ಮೇಲೆ ಸಿಖ್ ಧರ್ಮವನ್ನು ಸ್ಥಾಪಿಸಿದರು. ಅವರ ಬೋಧನೆಗಳು ಇಂದಿಗೂ ಅವರ ಲಕ್ಷಾಂತರ ಅನುಯಾಯಿಗಳಿಗೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತಿವೆ. ಅವರ ಜೀವನ ಮತ್ತು ಬೋಧನೆಗಳಿಂದ ಕೆಲವು ಹೇಳಿಕೆಗಳು ಮತ್ತು ಉಲ್ಲೇಖಗಳನ್ನು ಇಲ್ಲಿ ನೀಡಲಾಗಿದೆ.

**ಗುರು ನಾನಕ್ ಅವರ ಸ್ಪೂರ್ತಿದಾಯಕ ಹೇಳಿಕೆಗಳು ಮತ್ತು ಉಲ್ಲೇಖಗಳು:**

1. ತನ್ನ ಮೇಲೆ ನಂಬಿಕೆ ಇಲ್ಲದವನು ದೇವರಲ್ಲಿ ಎಂದಿಗೂ ನಂಬಿಕೆ ಇಡಲಾರ. 2. ದೇವರು ಒಬ್ಬನೇ, ಅವನ ಹೆಸರು ನಿಜ. ಸೃಜನಶೀಲ ಅವರ ವ್ಯಕ್ತಿತ್ವ ಮತ್ತು ಅಮರ ಅವರ ರೂಪ. ಅವನು ಭಯವಿಲ್ಲದವನು, ದ್ವೇಷವಿಲ್ಲದವನು, ಹುಟ್ಟಿಲ್ಲದವನು ಮತ್ತು ಸ್ವಯಂ ಪ್ರಕಾಶಿತನು. ಗುರುವಿನ ಕೃಪೆಯಿಂದ ಅವನು ಪ್ರಾಪ್ತನಾಗುತ್ತಾನೆ. 3. ಜಗತ್ತಿನಲ್ಲಿ ಯಾವ ಮನುಷ್ಯನೂ ಭ್ರಮೆಯಲ್ಲಿ ಬದುಕಬಾರದು. ಗುರುವಿಲ್ಲದೆ ಯಾರೂ ಇನ್ನೊಂದು ದಡವನ್ನು ದಾಟಲು ಸಾಧ್ಯವಿಲ್ಲ. 4. ದೇವರು ದಯಪಾಲಿಸಿದ ಸಂಪತ್ತನ್ನು ಜನ ತಮಗಾಗಿ ಅಥವಾ ನಿಧಿಗಾಗಿ ಬಳಸಿದರೆ ಅದು ಶವದಂತೆ. ಆದರೆ ಅವರು ಅದನ್ನು ಇತರರೊಂದಿಗೆ ಹಂಚಿಕೊಳ್ಳಲು ನಿರ್ಧರಿಸಿದರೆ ಅದು ಪವಿತ್ರ ಆಹಾರವಾಗುತ್ತದೆ. 5. ಮೂರ್ಖರು ಮಾತ್ರ ಮಾಂಸ ತಿನ್ನಬೇಕೋ ಬೇಡವೋ ಎಂದು ವಾದಿಸುತ್ತಾರೆ. ಅವರು ಸತ್ಯವನ್ನು ಅರ್ಥಮಾಡಿಕೊಳ್ಳುವುದಿಲ್ಲ ಮತ್ತು ಅದರ ಬಗ್ಗೆ ಧ್ಯಾನಿಸುವುದಿಲ್ಲ. ಮಾಂಸ ಎಂದರೇನು ಮತ್ತು ಸಸ್ಯ ಯಾವುದು ಎಂದು ಯಾರು ವ್ಯಾಖ್ಯಾನಿಸಬಹುದು? ಸಸ್ಯಾಹಾರಿಯೋ, ಮಾಂಸಾಹಾರಿಯೋ ಪಾಪ ಎಲ್ಲಿದೆಯೋ ಯಾರಿಗೆ ಗೊತ್ತು? 6. ನಿಮಗೆ ಗೌರವವನ್ನು ತರುವದನ್ನು ಮಾತ್ರ ಮಾತನಾಡಿ. 7. ಎಲ್ಲ ಪುರುಷರನ್ನು ಸಮಾನವಾಗಿ ಪರಿಗಣಿಸುವವನು ಧಾರ್ಮಿಕ 8. ಜಗತ್ತು ಒಂದು ನಾಟಕ, ಕನಸಿನಲ್ಲಿ ಪ್ರದರ್ಶಿಸಲಾಗಿದೆ.

# ಮನವೊಂದು ವ್ಯಾಪಾರದ ಸಂತೆ


✍ ಡಾ. ಧರ್ಮಪಾಲನಾಥ ಸ್ವಾಮೀಜಿ



ಆಧುನಿಕ ಆವಿಷ್ಕಾರಗಳ ನಡುವೆ ಮನಸ್ಸು ವ್ಯವಹಾರ–ವ್ಯಾಪಾರದ ಸಂತೆಯಾಗಿದೆಯೇ? ಮನಸ್ಸಿನ ಆಲೋಚನೆಗಳು ಚಾಂಚಲ್ಯತೆಯ ತೀವ್ರತೆಯು ಬದುಕಿನ ಪ್ರವಾಹವನ್ನು ನಡುಗಟ್ಟಿಸುವಂತೆ ಮಾಡಿದೆ. ಮನ ದರ್ಪಣದಲ್ಲಿ ಗೊಂದಲದ ವ್ಯೂಹವಿದೆ. ಅದರಲ್ಲಿ ಅತ್ಯಾಧುನಿಕ, ವೈಜ್ಞಾನಿಕ, ವೈಚಾರಿಕ, ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಮನೋವಿಶ್ಲೇಷಣೆಗಳ ಬೆಳವಣಿಗೆಯಲ್ಲಿ ಸಕಾರಾತ್ಮಕ, ನಕಾರಾತ್ಮಕ ಭಾವನೆಗಳ ಭರಾಟೆ ಮುಗಿಲು ಮುಟ್ಟಿದೆ. ಮನೋರಥದಲ್ಲಿ ವಿಷಯಾದಿಗಳು ಕಣ್ಮುಚ್ಚಾಲೆಯಾಡುತ್ತಿವೆ. ಇವುಗಳು ಸಂಪೂರ್ಣವಾಗಿ ಮನಸ್ಸಿನ ಅಸ್ಥಿರತೆಯನ್ನು ಸೃಷ್ಟಿಸುತ್ತವೆ. ಮೇಣದ ಗೊಂಬೆಯಂತೆ ನೋಡುಗರಿಗೆ ಆಕರ್ಷಣೆ ಹರ್ಷವನ್ನುಂಟು ಮಾಡುವುದೇ ವಿನಃ ಅದರಿಂದೇನೂ ಪ್ರಯೋಜವನವಿಲ್ಲ. ಸ್ವಲ್ಪ ಬೆಂಕಿ ತಾಗಿದರೂ ಕರಗುತ್ತದೆ. ಮನಸ್ಸಿನಲ್ಲಿ ಮೂಡುವ ವಾಂಛೆಗಳೇ ಹಾಗೆ. ಆತುರದ ನಿರ್ಧಾರ, ಆಕರ್ಷಣೆ, ವ್ಯಾಮೋಹದ ನಡುವೆ ಹಗಲುಗನಸು ಕಾಣುವ ವ್ಯಕ್ತಿಯನ್ನು ಭವಬಂಧನದಲ್ಲಿ ಸಿಲುಕುವಂತೆ ಮಾಡುತ್ತದೆ. ದಿನದಲ್ಲಿ ಸಹಸ್ರಾರು ಯೋಚನೆ, ಚಿಂತನೆಗಳು ಮನಸ್ಸಿನಲ್ಲಿ ಶರವೇಗವಾಗಿ ಬಂದು ಹೋಗುತ್ತದೆ. ಆಧುನಿಕ ವಿಷಯಾಸಕ್ತಿಗೆ ಮನಸ್ಸು ಒಗ್ಗುವಷ್ಟು ಬೇರೆ ಯಾವುದಕ್ಕೂ ಸಹಕರಿಸದು. ಆದ್ದರಿಂದಲೇ ಮಾನಸಿಕ ಒತ್ತಡದಿಂದ ಮನೋಗ್ಲಾನಿಯಾಗಿ ಬದುಕುವವರಿದ್ದಾರೆ, ಮನಸ್ಸಿನ ಶಕ್ತಿ ಸೌಧವು ಅಪ್ರತಿಮ ಸಾಧನಮಾಪಕ, ಅದರಿಂದ ವಿರಹದ ಭಾವವನ್ನಾಗಲಿ ಅಥವಾ ವಿರಕ್ತಿಯ ಭಾವವನ್ನಾಗಲಿ ತಾಳಬಹುದು. ಮನಸ್ಸು ಬಯಸಿದ ಹಾಗೆ ನಮ್ಮಂತ ರಂಗದ ಸಾಕ್ಷಿ ಪ್ರಜ್ಞೆಯು ಕೇಳಬಾರದು, ನಮ್ಮಂತರಂಗದ ಸಾಕ್ಷಿ ಪ್ರಜ್ಞೆ ಹೇಳಿದಂತೆ ಮನಸ್ಸು ಕೇಳಬೇಕು. ಪ್ರಾಜ್ಞನು ಈ ಹಾದಿಯನ್ನು ಅನುಸರಿಸಬಲ್ಲನೇ ಹೊರತು ಆಸೆಗಳ ದಾಸನು ಸಾಧಿಸಲಾರ. ಮನಯೇವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ ಮನಸ್ಸು ಬಂಧನಕ್ಕೂ ಮೋಕ್ಷಕ್ಕೂ ಕಾರಣವಾಗುತ್ತದೆ. ಆಧುನಿಕ ಬದುಕನ್ನು ಜೀವನದ ಸಂಕುಚಿತ ಬಂಧಿಕಾನೆಯಾಗಿ ಮಾರ್ಪಟ್ಟಿದೆ. ಮೊಬೈಲ್, ಟಿ.ವಿ., ಕಂಪ್ಯೂಟರ್‌ಗಳಲ್ಲಿ ಮನಸ್ಸು ಬಂಧನಕ್ಕೊಳಪಟ್ಟಿದೆ ವಿನಃ ನಾಲ್ಕು ಜನರ ನಡುವೆ ಬದುಕಿ ಬಾಳುವ ಮನಸ್ಥಿತಿ ನಿರ್ಮಾಣವಾಗುತ್ತಿಲ್ಲ. ದೇವರ ಚಿಂತೆ ಬಿಡಿ, ತಮ್ಮ ಮಕ್ಕಳ ಚಿಂತೆ ಮಾಡುವಷ್ಟು ಸಮಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಅಧುನಿಕ ಬದುಕಿನ ಭರಾಟೆಯಲ್ಲಿ ತನ್ನ ನಿಜ ಸ್ವರೂಪದ ಹಾದಿಯನ್ನು ಮರೆತಿದ್ದಾರೆ. ಯಾವುದು ಅಸ್ಥಿರವೋ, ಅದು ಸ್ಥಿರವಾಗಿ ಕಾಣುತ್ತಿದೆ. ಯಾವುದು ಅಪೇಕ್ಷಿತವೋ ಅದು ಅನಪೇಕ್ಷಿತವಾಗಿ ತೋರುತ್ತಿದೆ. ಇವುಗಳ ನಡುವೆ ಅಸ್ಥಿರವಾದ ಮನಸ್ಸು ಸ್ಥಿರವಾಗಿಯೇ ಉಳಿದ ಬದುಕಿನ ಉದ್ದೇಶ ಅರ್ಥವಾದರೆ ಅದಕ್ಕಿಂತ ಮಿಗಿಲಾದದ್ದು ಮತ್ತೊಂದಿಲ್ಲ. ॐ

**ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।**
**ಲೋಕೋತ್ತರಾಣಾಂ ಚೇತಾಂಸಿ ಕೋಹಿ ವಿಜ್ಞಾತುಮರ್ಹತಿ ॥**
ಉತ್ತರರಾಮಾಚರಿತ. 2.7
**ಶ್ರೇಷ್ಠರಾದವರ ಮನಸ್ಸು ಕೆಲವು ವೇಳೆ ವಜ್ರಕ್ಕಿಂತಲೂ ಗಡಸು. ಹಲವು ವೇಳೆ ಹೂವಿಗಿಂತಲೂ ಮೃದು. ಅವರ ಮನಸ್ಸನ್ನು ಅರಿಯುವುದು ಬಹಳ ಕಷ್ಟ**

### ಸಂಪ್ರೀತಿ ಸುಘೋಷ



**ಜ್ಞಾನ ಮತ್ತು ವಿಜ್ಞಾನ ಸಮ್ಮಿಲಿತವಾದ ಬದುಕನ್ನು ವ್ಯಕ್ತಿ ಸಮತೋಲನವಾಗಿ ಕಾಪಾಡಿಕೊಂಡಾಗ ಮಾತ್ರ ಸುಸ್ಥಿರವಾದ ಸ್ವಸ್ಥ ಸಮಾಜ ನಿರ್ಮಾಣವಾಗುತ್ತದೆ.**

ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ




# ಖಿನ್ನತೆ – ಸಾಮಾನ್ಯವಾದರೂ ಗಂಭೀರ !

**ಡಾ॥ ವಿನಯ್ ಹೆಚ್. ಆರ್.** ಮಾನಸಿಕ ಆರೋಗ್ಯ ವಿಭಾಗ, ಆ.ವೈ.ಮ.ವಿ ಬಿ.ಜಿ. ನಗರ

**ಖಿನ್ನತೆ ಎಂದರೇನು ?**

ಮನುಷ್ಯ ತನ್ನ ಜೀವನದಲ್ಲಿ ಹಲವಾರು ಬಾರಿ ದು:ಖ ಅಥವಾ ಸಂತೋಷದ ಭಾವನೆಗಳನ್ನು ಅನುಭವಿಸುವುದು ಸಹಜ. ಇದು ಕೆಲವು ನಿಮಿಷಗಳ ಅವಧಿಯಾಗಬಹುದು ಅಥವಾ ಹಲವು ದಿವಸಗಳವರೆಗೂ ಮುಂದುವರೆಯುವ ಮನಸ್ಥಿತಿಯಾಗಬಹುದು.

ಮನೋವೈದ್ಯಶಾಸ್ತ್ರದ ಪ್ರಕಾರ ಒಂದೇ ಸಮ ಎರಡು ವಾರಗಳಿಗಿಂತ ಮೇಲ್ಪಟ್ಟು ಕುಗ್ಗಿದ ಮನಸ್ಥಿತಿ, ಯಾವುದೇ ಚಟುವಟಿಕೆಗಳಲ್ಲಿ ನಿರಾಸಕ್ತಿ ಹಾಗೂ ಸ್ವಲ್ಪ ಶ್ರಮಿಸಿದರೂ ಸುಸ್ತಾಗುವಿಕೆ ಕಂಡು ಬಂದರೆ 'ಖಿನ್ನತೆ' ಎಂದು ಪರಿಗಣಿಸಲಾಗುತ್ತದೆ.

**ಇದಲ್ಲದೆ ಈ ಕೆಳಗಿನ ಲಕ್ಷಣಗಳು ಕೂಡ ಖಿನ್ನತೆಯಲ್ಲಿ ಕಂಡುಬರಬಹುದು:**

01. ಮೊದಲು ಇಷ್ಟಪಟ್ಟು ಮಾಡುತ್ತಿದ್ದ ಚಟುವಟಿಕೆಗಳು ನೀರಸವೆನಿಸುವುದು.
02. ಆತ್ಮ ವಿಶ್ವಾಸ ಕುಗ್ಗುವಿಕೆ
03. ತನ್ನ ಬಗ್ಗೆ/ ಜೀವನದ ಬಗ್ಗೆ/ಭವಿಷ್ಯದ ಬಗ್ಗೆ ಜಿಗುಪ್ಸೆ
04. ಏಕಾಗ್ರತೆಯ ಕೊರತೆ
05. ಹಸಿವಿಲ್ಲದಿರುವುದು/ ಅತಿಯಾಗಿ ಹಸಿವಾಗುವುದು
06. ಅತಿಯಾದ ತಪ್ಪಿತಸ್ಥ ಭಾವನೆ
07. ನಿದ್ದೆಯ ಕೊರತೆ/ ಅತಿಯಾದ ನಿದ್ದೆ
08. ಕುಗ್ಗಿದ ಲೈಂಗಿಕಾಸಕ್ತಿ
09. ಆತ್ಮಹತ್ಯೆ ಬಗ್ಗೆ ಆಲೋಚನೆಗಳು/ಪ್ರಯತ್ನ
10. ವಿನಾಕಾರಣ ಸಿಡುಕು/ ತಲೆನೋವು/ ಮೈ ಕೈ ನೋವು

ಆರೋಗ್ಯ ಸುಧೆ

ಈ ಎಲ್ಲಾ ಗುಣ ಲಕ್ಷಣಗಳು ಒಂದೇ ಬಾರಿ ಒಬ್ಬ ಮನುಷ್ಯನಲ್ಲೇ ಇರಬೇಕೆಂದಿಲ್ಲ. ಜೊತೆಗೆ ಈ ಲಕ್ಷಣಗಳು ವಾರಗಟ್ಟಲೆ ಇರುವುದಾದರೆ 'ಖಿನ್ನತೆ' ಖಚಿತ ಪಡಿಸಿಕೊಳ್ಳಲು ಹತ್ತಿರದ ಮಾನಸಿಕ ತಜ್ಞರನ್ನು ಭೇಟಿಯಾಗುವುದು ಅವಶ್ಯಕ. ಖಿನ್ನತೆ ಎಂದರೆ ದುರ್ಬಲತೆ ಅಥವಾ ಮಾನಸಿಕ ಅಸ್ಥಿರತೆ ಎಂದಲ್ಲ. ಇದು ಮಧುಮೇಹ ಅಥವಾ ಮಾನಸಿಕ ಅಸ್ಥಿರತೆ ಎಂದಲ್ಲ. ಇದು ಮಧುಮೇಹ ಅಥವಾ ಹೃದಯ ಸಮಸ್ಯೆಯಂತೆಯೇ ಒಂದು ಖಾಯಿಲೆ. ಖಿನ್ನತೆ ಯಾರಿಗಾದರೂ, ಯಾವ ವಯಸ್ಸಿನಲ್ಲಾದರೂ ಕಾಣಿಸಿಕೊಳ್ಳಬಹುದು.

**ಖಿನ್ನತೆಗೆ ಕಾರಣಗಳು :**

⁕ ಜೀವನದಲ್ಲಿ ನಡೆಯುವ ದುರ್ಘಟನೆಗಳು, ಮಾನಸಿಕ ಒತ್ತಡ ಉಂಟುಮಾಡುವ ಸಮಸ್ಯೆ (ಹಣಕಾಸು, ಸಂಬಂಧಗಳಲ್ಲಿ ಮನಸ್ತಾಪ, ಹತ್ತಿರವಾದ ಸಾವು, ದಾಂಪತ್ಯ ವಿರಸ ಇತ್ಯಾದಿ)

⁕ ದೀರ್ಘಕಾಲೀನ ದೈಹಿಕ ಆರೋಗ್ಯ ಸಮಸ್ಯೆಗಳು (ಥೈರಾಯ್ಡ್, ಮಧುಮೇಹ, ಹೃದ್ರೋಗ, ಕ್ಯಾನ್ಸರ್, ಏಡ್ಸ್, ಕಿಡ್ನಿ ವೈಫಲ್ಯ)

⁕ ಅನುವಂಶೀಯ ಕಾರಣಗಳು/ದುರ್ಬಲ ವ್ಯಕ್ತಿತ್ವ

⁕ ಮಾದಕ ವಸ್ತುಗಳ ಸೇವನೆ

⁕ ಇತರೆ ಮಾನಸಿಕ ಖಾಯಿಲೆಯೊಂದಿಗೆ, ಉದಾ: ಗೀಳು ಖಾಯಿಲೆ (ಅಬ್ಸೆಸಿವ್ ಕಂಪಲ್ಸಿವ್ ಡಿಸಾರ್ಡರ್), ಸಾಮಾಜಿಕ ಸನ್ನಿವೇಶಗಳಲ್ಲಿ ಆತಂಕ (ಸೋಷಿಯಲ್ ಫೋಬಿಯಾ) ಕವಲುಮನ / ಛಿದ್ರ ಮನಸ್ಕತೆ ( ಸ್ಕಿಜೋಫ್ರೇನಿಯಾ)

**ಖಿನ್ನತೆಯನ್ನು ಪತ್ತೆ ಮಾಡುವುದು ಹೇಗೆ?**

ಯಾವುದೇ ರಕ್ತಪರೀಕ್ಷೆ ಅಥವಾ ಸ್ಕ್ಯಾನ್ ಮುಖಾಂತರ ಖಿನ್ನತೆಯನ್ನು ಖಚಿತ ಪಡಿಸಲು ಆಗುವುದಿಲ್ಲ. ವ್ಯಕ್ತಿಯಲ್ಲಿ ಕಾಣಿಸುತ್ತಿರುವ ಗುಣಲಕ್ಷಣಗಳು, ಅವುಗಳ ತೀವ್ರತೆ, ದೈನಂದಿನ ಚಟುವಟಿಕೆಗಳ ಮೇಲೆ ಪ್ರಭಾವ ಮುಂತಾದವುಗಳ ಬಗ್ಗೆ ವೈದ್ಯರು ಪ್ರಶ್ನಾವಳಿಗಳ ನೆರವಿನಿಂದ ತಿಳಿದುಕೊಳ್ಳುತ್ತಾರೆ. ನಂತರ ವೈದ್ಯಕೀಯ ತಪಾಸಣೆಯ ಮೂಲಕ ಇದು ಖಿನ್ನತೆಯೋ ಅಲ್ಲವೋ ಎಂದು ಖಚಿತ ಪಡಿಸಿಕೊಳ್ಳುತ್ತಾರೆ.

**ಖಿನ್ನತೆ – ಚಿಕಿತ್ಸೆ ವಿಧಾನಗಳು :**

ಜಗತ್ತಿನಲ್ಲಿ ಮನುಷ್ಯನನ್ನು ಅತ್ಯಂತ ಹೆಚ್ಚು ನಿಷ್ಕ್ರಿಯಗೊಳಿಸುವ ಖಾಯಿಲೆಗಳಲ್ಲಿ ಖಿನ್ನತೆ ಕೂಡ ಒಂದು ವಿಶ್ವ ಆರೋಗ್ಯ ಸಂಸ್ಥೆ ದಾಖಲಿಸಿದೆ. ಆದರೆ ಖಿನ್ನತೆಯಿಂದ ಬಳಲುತ್ತಿರುವವರು ಗುಣಮುಖರಾಗಿ ಸಹಜ ಜೀವನ ನಡೆಸಬಹುದು. ಸಮಾಜದಲ್ಲಿ ಖಿನ್ನತೆಯ ಲಕ್ಷಣಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದು ದೌರ್ಬಲ್ಯದ ಸಂಕೇತವೆಂದು ತಪ್ಪು ಕಲ್ಪನೆ ಜನರಲ್ಲಿ ಮನೆಮಾಡಿದೆ. ಇದರಿಂದಾಗಿ ಖಿನ್ನತೆ ಸಮಸ್ಯೆಯಿಂದ ಬಳಲುತ್ತಿದ್ದರು ಅನೇಕರು ಅದನ್ನು ಮುಚ್ಚಿಡುವ ಪ್ರಯತ್ನ ಮಾಡುತ್ತಾರೆ. ಖಾಯಿಲೆಯ ಬಗ್ಗೆ ತಿಳುವಳಿಕೆ ಇಲ್ಲದ ಕಾರಣ, ದೀರ್ಘಕಾಲ ತಾವೂ ಬಳಲುತ್ತಾರೆ ಮತ್ತು ಕುಟುಂಬದವರು ಸಹ ಯಾತನೆ ಪಡುತ್ತಾರೆ.

ಸ್ವಲ್ಪಮಟ್ಟದ ಖಿನ್ನತೆಗೆ ಆಪ್ತ ಸಮಾಲೋಚನೆ ಅಥವಾ ನಡವಳಿಕೆ ಚಿಕಿತ್ಸೆಗಳು ಸಾಕಾಗುತ್ತವೆ. ತೀವ್ರವಾದ ಖಿನ್ನತೆಗೆ ಮಾತ್ರ ಇವುಗಳೊಂದಿಗೆ ಔಷಧಗಳ ಅಗತ್ಯವಿರುತ್ತದೆ.

**ಖಿನ್ನತೆಯ ಚಿಕಿತ್ಸೆಯಲ್ಲಿ ಹಲವು ವಿಧಾನಗಳಿವೆ:**

01. ಆಪ್ತ ಸಮಾಲೋಚನೆ ಮತ್ತು ಮನೋ ವೈಜ್ಞಾನಿಕ ನಡವಳಿಕೆ ಚಿಕಿತ್ಸೆಗಳು – ಸಕಾರಾತ್ಮಕ ಚಿಂತನೆಗಳು ಮತ್ತು ಸಮಸ್ಯೆಯನ್ನು ಎದುರಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ವಿಧಾನಗಳನ್ನು ಕಲಿಸಲಾಗುತ್ತದೆ.

02. ತೀವ್ರವಾದ ಖಿನ್ನತೆಗೆ ವೈದ್ಯರು ಔಷಧಿಗಳನ್ನು ಶಿಫಾರಸ್ಸು ಮಾಡುತ್ತಾರೆ.

03. ಮಧುಮೇಹ, ಥೈರಾಯ್ಡ್ ಅಥವಾ ಇತರ ಖಾಯಿಲೆಗಳೊಂದಿಗೆ ಬಂದಿರುವ ಖಿನ್ನತೆಯಾದರೆ, ಅದಕ್ಕೆ ತಕ್ಕಂತೆ ಸೂಕ್ತ ಚಿಕಿತ್ಸೆ ನೀಡುತ್ತಾರೆ.

04. ವಿದ್ಯುನ್ಮಾನ ಚಿಕಿತ್ಸೆ (ಎಲೆಕ್ಟ್ರೋಕನ್ವಲ್ಸಿವ್ ಥೆರಪಿ) : ಔಷಧಿ ಅಥವಾ ಇತರೆ ಚಿಕಿತ್ಸಾ ವಿಧಾನಗಳಿಗೆ ಸ್ಪಂದಿಸದಿದ್ದಾಗ ಅಥವಾ ಆತ್ಮಹತ್ಯೆಗೆ ಗಂಭೀರವಾಗಿ ಪ್ರಯತ್ನಿಸುತ್ತಿರುವ ಸ್ಥಿತಿ ಇದ್ದಾಗ ಈ ಚಿಕಿತ್ಸೆ ನೀಡಲಾಗುತ್ತದೆ. ॐ

# ಆಲೂಗೆಡ್ಡೆ



(ಸುಲಭ ಬೆಳೆ.. ಅಧಿಕ ಲಾಭ)



ಆಲೂಗೆಡ್ಡೆ ತಂಪು ವಾತಾವರಣ ಬಯಸುವ ಬೆಳೆಯಾಗಿದ್ದು ಗೆಡ್ಡೆ ಬೆಳವಣಿಗೆಯ ಸಮಯದಲ್ಲಿ 20 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ಇದ್ದರೆ ಗೆಡ್ಡೆಗಳು ಚೆನ್ನಾಗಿ ಕಟ್ಟುತ್ತದೆ. ಈ ಹಂತದಲ್ಲಿ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್‌ಗಿಂತ ಜಾಸ್ತಿ ಇದ್ದಲ್ಲಿ ಗೆಡ್ಡೆಯ ಬೆಳವಣಿಗೆ ಸಂಪೂರ್ಣ ನಿಂತು ಹೋಗುತ್ತದೆ. ಮಳೆ ಅಥವಾ ಹಾಯಿಸಿದ ನೀರಾವರಿಯಲ್ಲೂ ಆಲೂಗೆಡ್ಡೆ ಬೆಳೆಯಲು ಸಾಧ್ಯ.

ವಾತಾವರಣದಲ್ಲಿ ಉಷ್ಣಾಂಶ 35 ಡಿಗ್ರಿಗಿಂತಲೂ ಹೆಚ್ಚಾದಲ್ಲಿ ಗೆಡ್ಡೆಯ ಗಾತ್ರ ಕಡಿಮೆಯಾಗುವ ಸಾಧ್ಯತೆ ಇದೆ. ಭೂಮಿಯಲ್ಲಿ ತೇವಾಂಶ ಕಾಪಾಡಿಕೊಳ್ಳಬೇಕು. ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಈ ರೀತಿ ಮಾಡಿದಲ್ಲಿ ಉತ್ತಮ ಫಸಲು ನಿರೀಕ್ಷಿಸಬಹುದು. ಒಂದು ಹೆಕ್ಟೇರ್ ಪ್ರದೇಶಕ್ಕೆ 50 ಸಾವಿರ ಬಿತ್ತನೆ ಬೀಜ ಖರೀದಿ ಸೇರಿದಂತೆ ಕೂಲಿ, ಗೊಬ್ಬರ ಖರ್ಚು ತಗಲುತ್ತದೆ. ಅರೆ ಮಲೆನಾಡು ಪ್ರದೇಶಗಳಲ್ಲಿ ಈ ತಳಿ ಆಲೂಗೆಡ್ಡೆ ಒಂದು ಎಕರೆಗೆ 10 ಟನ್ ಇಳುವರಿ ಸರಾಸರಿ ಬರುತ್ತದೆ.

ಬಿತ್ತನೆಯನ್ನು ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಹಿಂಗಾರು ಬೆಳೆಯನ್ನಾಗಿ ಬೆಳೆಯಲಾಗುತ್ತಿದೆ. ಭೂಮಿಯಲ್ಲಿ ಉಷ್ಣಾಂಶ ಜಾಸ್ತಿ ಇದ್ದ ಸಮಯದಲ್ಲಿ ಬಿತ್ತನೆ ಮಾಡಿದರೆ ಗೆಡ್ಡೆ ಕೊಳೆಯುವುದು ಜಾಸ್ತಿಯಾಗಿ ಮೊಳಕೆ ಪ್ರಮಾಣ ಬಹಳ ಕಡಿಮೆಯಾಗುತ್ತದೆ. ರೋಗ ನಿರೋಧಕ ತಳಿಗಳಾದ ಕುಫ್ರಿ ಪುಕಾರಾಜ್ (75 ರಿಂದ 90 ದಿನಗಳು), ಕುಫ್ರಿ ಜ್ಯೋತಿ (95 ರಿಂದ 100 ದಿನಗಳು) ಕೊಯ್ಲಿಗೆ ಬರುತ್ತವೆ.

ಅರೆ ಮಲೆನಾಡಿನಲ್ಲಿ ಬೆಳೆಯುವ ಆಲೂಗೆಡ್ಡೆಗೆ ರೋಗ ಬಾಧೆ ಇರುವುದಿಲ್ಲ. ಆಕಸ್ಮಿಕವಾಗಿ ಬಂದಲ್ಲಿ ಲೇಟ್‌ಬ್ಲೈಟ್ ಎಂಬ ರೋಗ ತಗುಲಬಹುದು. ಸೂಕ್ತ ಔಷಧಿ ಸಿಂಪಡಣೆಯಿಂದ ರೋಗ ಹತೋಟಿ ಸಾಧ್ಯ. ಆಲೂ ಬೇಸಾಯಕ್ಕೆ ಕೃಷಿ ಕೂಲಿ ಕಾರ್ಮಿಕರ ಅವಲಂಬನೆ ಅತ್ಯಂತ ಕಡಿಮೆ. ಬಿತ್ತನೆ ಹಾಗೂ ಕಟಾವು ಹಂತದಲ್ಲಿ ಹೆಚ್ಚು ಕಾರ್ಮಿಕರ ಅವಶ್ಯಕತೆ ಇರುತ್ತದೆ. ಉಳಿದಂತೆ ಮನೆಯವರೇ ಸೇರಿ ಕಳೆ ತೆಗೆದು ಕುಂಟೆ ಹೊಡೆಯಲು ಕೈ ಜೋಡಿಸಿದರೆ ಉತ್ಪಾದನಾ ವೆಚ್ಚ ತಗ್ಗಿ ಲಾಭಾಂಶ ಹೆಚ್ಚಿಸಿಕೊಳ್ಳಬಹುದು.

ಆಲೂಗೆಡ್ಡೆಯನ್ನು ಎರಡು ಭಾಗ ಮಾಡಿ ಮೊಳಕೆ ಒಡೆದ ಭಾಗವನ್ನು ಮೇಲ್ಭಾಗ ಮಾಡಿ ನಾಟಿ ಮಾಡಬೇಕು. ನಾಟಿ ಮಾಡುವ ವಿಧಾನ ಬಲು ಸುಲಭ. ಒಂದು ಆಲೂಗೆಡ್ಡೆಯನ್ನು ಎರಡು ಭಾಗ ಮಾಡಿ ಮೊಳಕೆ ಒಡೆದ ಭಾಗವನ್ನು ಮೇಲ್ಭಾಗ ಮಾಡಿ ನಾಟಿ ಮಾಡಬೇಕು, ನಾಟಿ ಮಾಡುವ ಮುನ್ನ ಭೂಮಿಯನ್ನು ಸಂಪೂರ್ಣ ತಂಪಾಗಿಸುವುದು ಕಡ್ಡಾಯ.

ಬಿತ್ತನೆ ಮಾಡುವ ಮುನ್ನ ಹಾಗೂ ನಂತರದಲ್ಲಿ ಕಳೆ ನಿಯಂತ್ರಣ ಅತಿ ಮುಖ್ಯ. ಆಲೂಗೆಡ್ಡೆ 3 ತಿಂಗಳ ಬೇಸಾಯ. ಬಿತ್ತನೆ ಕಾರ್ಯ ಮಾಡಿದ 15 ದಿನಕ್ಕೆ ಕಳೆ ತೆಗೆದು ಕುಂಟೆ ಹೊಡೆದ ಬಳಿಕ 3ನೇ ಕಳೆ ತೆಗೆದು ನೀರು ಕಟ್ಟುವುದರಿಂದ ಆಲೂಗೆಡ್ಡೆ ಹೂವು ಕಚ್ಚಲು ಆರಂಭವಾಗುತ್ತದೆ. ಈ ಬೆಳೆಗೆ ಪ್ರತಿ ಎಕರೆಗೆ 10 ಟನ್ ಕೊಟ್ಟಿಗೆ ಗೊಬ್ಬರ ಸೇರಿದಂತೆ 20:20 ರಸಗೊಬ್ಬರ 2 ಬಾರಿ ನೀಡಿದರೆ ಸಾಕು. ನಾಟಿ ಮಾಡಿದ 20 ದಿನದ ಬಳಿಕ ಮತ್ತು ಒಂದು ತಿಂಗಳ ನಂತರದಲ್ಲಿ ಒಂದು ಎಕರೆಗೆ 100 ಕೆ.ಜಿ. ರಾಸಾಯನಿಕ ಗೊಬ್ಬರ ನೀಡಬೇಕು.

ಆಲೂಗೆಡ್ಡೆಯ ಬಿತ್ತನೆ ಬೀಜ ಖರೀದಿ ಮಾಡುವಾಗ ಎಚ್ಚರ ವಹಿಸಬೇಕು. ರೈತರು ಬಿತ್ತನೆಗೆ ಬಳಸುವ ಆಲೂಗೆಡ್ಡೆಯನ್ನು

ವಿಶ್ವಾಸಾರ್ಹ ಮೂಲಗಳಿಂದಲೇ ಪಡೆಯಬೇಕು ಹಾಗೂ ಬೀಜ ಖರೀದಿಸಿದ ಬಾಬ್ತು, ತಳಿ, ದರ ಇತ್ಯಾದಿ ವಿವರಗಳು, ಹಣ ಪಾವತಿಸಿದ ಬಿಲ್ಲನ್ನು ಕಡ್ಡಾಯವಾಗಿ ವ್ಯಾಪಾರಿಗಳಿಂದ ಪಡೆಯಬೇಕು, ಖರೀದಿಸುವಾಗ ಪ್ರತಿ ಚೀಲವನ್ನು ಪರೀಕ್ಷಿಸಿ ಗೆಡ್ಡೆಗಳು ಕೊಳೆತಿರುವುದನ್ನು ಖಾತ್ರಿ ಪಡಿಸಿಕೊಂಡು ಖರೀದಿಸಬೇಕು.

ಆಲೂಗೆಡ್ಡೆ ಬಿತ್ತನೆ ನಂತರ ನಿಯಮಿತವಾಗಿ ಸಸ್ಯ ಸಂರಕ್ಷಣಾ ಔಷಧಿ ಸಿಂಪಡಣೆ ಮಾಡಬೇಕು. ಬೀಜ ಖರೀದಿಸಿದ ನಂತರ ಮಂದ ಬೆಳಕಿನಲ್ಲಿ ಸುಮಾರು 8–10 ದಿನಗಳ ಕಾಲ ತೆಳುವಾಗಿ ಹರಡಬೇಕು ಹಾಗೂ ಅದಷ್ಟು ಉಂಡೆ ಗೆಡ್ಡೆಗಳನ್ನು ಬಿತ್ತನೆಗೆ ಬಳಸಬೇಕು. ಕತ್ತರಿಸಿದ ಗೆಡ್ಡೆಗಳನ್ನು (ಮ್ಯಾಂಕೋಜೆಬ್ 4 ಗ್ರಾಂ + ಮೆಟಲಾಕ್ಸಿಲ್ 1 ಗ್ರಾಂ + ಸ್ಟ್ರೆಪಟೋಮೈಸಿನ್ ಸಲ್ಫೇಟ್ 0.5 ಗ್ರಾಂ) ಪ್ರತಿ ಲೀಟರ್ ನೀರಿನಲ್ಲಿ ಬೀಜೋಪಚಾರ ಮಾಡುವುದರಿಂದ ಮಣ್ಣಿನಿಂದ ಬರುವ ರೋಗಾಣುಗಳಿಂದ ರಕ್ಷಿಸಬಹುದು. ಬಿತ್ತನೆ ಬಳಿಕ ಆಲೂಗಡ್ಡೆ ತಾಕಿನಲ್ಲಿ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಹನಿ ನೀರಾವರಿ ಅಳವಡಿಸಿಕೊಂಡು ಬೆಳೆಯುವುದರಿಂದ ಹೆಚ್ಚಿನ ಇಳುವರಿ ಸಿಗಲಿದೆ. ಬಿತ್ತನೆಗೆ 15 ದಿವಸ ಮುಂಚಿತವಾಗಿ ಭೂಮಿ ಸಿದ್ದಗೊಳಿಸುವುದು. ಜೈವಿಕ ಗೊಬ್ಬರ ಮತ್ತು ಸಾವಯವ ಗೊಬ್ಬರದೊಂದಿಗೆ ಜೈವಿಕ ಶಿಲೀಂಧ್ರ ನಾಶಕಗಳ ಮಿಶ್ರ ಮಾಡಿ ಮಣ್ಣಿನಲ್ಲಿ ಬೆರೆಸುವುದು. ಶೀತಲ ಗೃಹದಿಂದ ತೆಗೆದ ನಂತರ 10 ರಿಂದ 15 ದಿವಸಗಳ ಕಾಲ ಮಂದ ಬೆಳಕಿನಲ್ಲಿ ಗಾಳಿಯಾಡುವ ಸ್ಥಳದಲ್ಲಿ ತೆಳ್ಳಗೆ ಹರಸಿ ಹದಗೊಳಿಸಬೇಕು.


ಬಿತ್ತನೆಗೆ ಉಪಯೋಗಿಸುವ ಪ್ರತಿ ಬೀಜ 35–40 ಗ್ರಾಂ ಇರಬೇಕು. ಆಲೂಗೆಡ್ಡೆ ಗಾತ್ರ ದೊಡ್ಡದಾಗಿದ್ದಲ್ಲಿ ಉದ್ದವಾಗಿ ಕತ್ತರಿಸಬೇಕು. ಪ್ರತಿ ಹೋಳು 35–40 ಗ್ರಾಂ ಇರಬೇಕು. ಪ್ರತಿ ಬೀಜದಲ್ಲಿ ಕನಿಷ್ಟ 2–3 ಕಣ್ಣುಗಳು ಇರಬೇಕು. ಬಿತ್ತಿದ 20–25 ದಿನಗಳ ನಂತರ ಮ್ಯಾಂಕೊಜಿಬ್ (3 ಗ್ರಾಂ/ಲೀ. ನೀರಿನಲ್ಲಿ) ಮತ್ತು ಡೈಮಿಥೋಯೆಟ್ (2.5 ಮಿ.ಲೀ/ಲೀ ನೀರಿನಲ್ಲಿ) ಅಥವಾ ಬಿತ್ತಿದ 40–45 ದಿನಗಳ ನಂತರ ಮ್ಯಾಂಕೋಜಿಬ್ (3 ಗ್ರಾಂ/ಲೀ ನೀರಿನಲ್ಲಿ ಅಥವಾ ಇಮಿಡೋಕ್ಲೋರೋಫೈಟ್ (0.5 ಮಿ./ಲೀ ನೀರಿನಲ್ಲಿ) ಸಿಂಪಡಣೆ ಮಾಡಬಹುದು.

ಆಲೂಗೆಡ್ಡೆ ಮುಖ್ಯವಾಗಿ ಗೆಡ್ಡೆಯಿಂದ ಸಸ್ಯಾಭಿವೃದ್ಧಿಯಾಗುವ ಬೆಳೆ. ಈ ಗೆಡ್ಡೆಗಳಿಂದ ಅನೇಕ ರೋಗಗಳು ಹರಡುವುದಾದರೂ ಅತಿ ಮುಖ್ಯವಾಗಿ ಎರಡು ರೋಗಗಳ ಬಗ್ಗೆ ಬಹಳ ಜಾಗರೂಕರಾಗಿರಬೇಕಾಗುತ್ತದೆ. ಅವುಗಳೆಂದರೆ ಎಲೆ ಮುದುಡು ರೋಗ ಮತ್ತು ಸೊರಗು ರೋಗ. ಈ ರೋಗಗಳು ಗೆಡ್ಡೆಗಳ ಮುಖಾಂತರ ಹರಡುವುದರಿಂದ ಬಿತ್ತನೆ ಗೆಡ್ಡೆಗಳನ್ನು ವಿಶ್ವಾಸಾರ್ಹ ಮೂಲಗಳಿಂದ ಪಡೆಯುವುದು ಒಳ್ಳೆಯದು. ಬಿತ್ತನೆ ಗೆಡ್ಡೆಗಳನ್ನು ಖರೀದಿಸಿದ ಮೇಲೆ ನೇರವಾಗಿ ನಾಟಿ ಮಾಡುವುದಕ್ಕೆ ಉಪಯೋಗಿಸದೆ ತಂಪಾಗಿರುವ ನೆರಳಿನ ಪ್ರದೇಶದಲ್ಲಿ ಗಾಳಿಯಾಡುವಂತೆ ಹರಡುವುದು. ನಂತರ ದಪ್ಪನಾದ ಉಬ್ಬಿದ ಕಣ್ಣುಗಳು ಮೂಡಿದಾಗ ಗೆಡ್ಡೆಗಳನ್ನು ಉದ್ದುದ್ದವಾಗಿ ಸುಮಾರು 35–40 ಗ್ರಾಂ ತೂಕದ್ದಾಗಿದ್ದು ಕನಿಷ್ಟ ಎರಡು ಕಣ್ಣುಗಳಿರುವಂತೆ ಕತ್ತರಿಡಬೇಕು. ಪ್ರತಿಸಲ ಗೆಡ್ಡೆಯನ್ನು ಕತ್ತರಿಸುವಾಗ ಕುಡುಗೋಲನ್ನು ಹಾಲ್ಕೋಹಾಲ್, ಸ್ಪಿರಿಟ್ ಅಥವಾ ಫಾರ್ಮಲಿನ್‌ನಲ್ಲಿ ಅದ್ದಬೇಕು. ನಂತರ ಬೀಜದ ಗೆಡ್ಡೆಗಳನ್ನು ಮ್ಯಾಂಕೋಜೆಬ್ 2 ಗ್ರಾಂ ಅನ್ನು ಪ್ರತಿ ಲೀಟರ್ ನೀರಿನಲ್ಲಿ 5 ನಿಮಿಷ ಅದ್ದಿ ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡಬೇಕು.

ಭೂಮಿಯನ್ನು ಹದಿನೈದು ದಿನ ಮುಂಚಿತವಾಗಿ 2 ರಿಂದ 3 ಸಾರಿ ಆಳವಾಗಿ ಉಳುಮೆ ಮಾಡಿ, ಹೆಂಟೆಗಳನ್ನು ಚೆನ್ನಾಗಿ ಒಡೆದು ಪುಡಿ ಮಾಡಬೇಕು. ಗೆದ್ದಲಿನ ಸಮಸ್ಯೆ ಕಂಡು ಬಂದಲ್ಲಿ 3.3 ಮಿ.ಲೀ. ಕ್ಲೋರೋಫೈರಿಫಾಸ್ ಅನ್ನು ಪ್ರತಿ ಲೀ. ನೀರಿನಲ್ಲಿ ಬೆರೆಸಿ ಪ್ರತಿ ಹುತ್ತಕ್ಕೂ ಸುರಿಯಬೇಕು. ಆಲೂಗೆಡ್ಡೆಯಲ್ಲಿ ಗೆಡ್ಡೆಯನ್ನು ಬಿತ್ತನೆ ಮಾಡಿ 45 ದಿನಗಳ ನಂತರ ಸಸ್ಯವರ್ಧಕ ಮೆಪಿಕ್ವಾಟ್ ಕ್ಲೋರೈಡ್ 10 ಮಿ.ಲೀ. ಅನ್ನು ಪ್ರತಿ ಲೀ. ನೀರಿನಲ್ಲಿ ಬೆರೆಸಿ ಎಲೆಗಳ ಮೇಲೆ ಸಿಂಪಡನೇ ಮಾಡುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು. ॐ



Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**


ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
“ನನ್ನ ಜೀವನವೇ ನನ್ನ ಸಂದೇಶ.”
- ಮಹಾತ್ಮ ಗಾಂಧಿ
ಮಹಾತ್ಮ ಗಾಂಧಿಯವರ 154ನೇ ಜನ್ಮದಿನಾಚರಣೆ
ನಮ್ಮ ಬದುಕುವ ರೀತಿ ಇತರರಿಗೆ ಆದರ್ಶಪ್ರಾಯವಾಗಬೇಕು ಎಂಬ ತತ್ವದಲ್ಲಿ ಗಾಂಧೀಜಿ ನಂಬಿಕೆಯಿಟ್ಟಿದ್ದರು. ಗಾಂಧೀಜಿಯವರ ಆದರ್ಶಗಳಿಂದ ಪ್ರೇರಿತರಾಗಿ ಅವರ ಹೆಜ್ಜೆಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ಗೌರವ.
ನಾಡಿನ ಜನತೆಗೆ ಗಾಂಧಿ ಜಯಂತಿಯ ಶುಭಾಶಯಗಳು.
- ಬಸವರಾಜ ಎಸ್. ಬೊಮ್ಮಾಯಿ

Registered with Registrar of News Papers for India No.KARKAN/2018/76081, **Sampreethi Samruddhi,** Nov. - 2022.
License to post without prepayment. License No.**KA/BG/CNA/119/2022-2024,**
Date of publication: **28.10.2022.** Posted at **Magadi Sub Post Office-562120** on **29th** of every month




To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120